
Edited with the trial version of
Foxit Advanced PDF Editor
To remove this notice, visit:
www.foxitsoftware.com/shopping



ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಧಾರವಾಡ

# ಅರಿವಿನ ಪಯಣ

ಸಾರ್ವಜನಿಕ ಹಿತಾಸಕ್ತಿ ಪ್ರಕಟಣೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಹೆಜ್ಜೆ ಗುರುತು

- ಪ್ರೀತಿಯ ಮಕ್ಕಳೇ
- ಕ.ರಾ.ಮ.ದೌ.ವಿ.ಒಕ್ಕೂಟ
- ಮಹಿಳಾ ದಿನಾಚರಣೆಯ ಇತಿಹಾಸ
- 'ನಾನು ಸಹಾ' –ಪೋಕ್ಸೋ
- ಕಪ್ಪು ಬಲೂನ್ ಕೂಡಾ ಹಾರುತ್ತಾ?
- ಬೆವರು–ಬದುಕು
- ಯಾವುದು ನಿಜವಾದ ಮೆರಿಟ್?
- ಮುಟ್ಟು ಮುಟ್ಟೆಂದೇಕೆ
- ಕುಲಕುಲ ಕುಲವೆಂದು
- ಶಾಲೆ ಬಿಟ್ಟಿದ್ದು ಯಾಕೆ?
- ಬಾಲಕಾರ್ಮಿಕರು
- ಬಾಲ್ಯವಿವಾಹ
- ಗುಜ್ಜರ ಮದುವೆ
- ತಾಯಿ ಮರಣ
- ದೇವದಾಸಿ ಪದ್ಧತಿ
- ಮದ್ಯಪಾನ ನಿಷೇಧ



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

Edited with the trial version of Foxit Advanced PDF Editor
To remove this notice, visit: www.foxitsoftware.com/shopping

## ಪ್ರೀತಿಯ ಮಕ್ಕಳೆ,

ನಾವು ಯಾರು, ಯಾಕೆ ನಿಮ್ಮ ಬಳಿ ಈ ಪುಸ್ತಕದೊಂದಿಗೆ ಬರುತ್ತಿದ್ದೇವೆ ಅಂತ ನಿಮಗೆ ಕುತೂಹಲ ಇರಬಹುದಲ್ಲವೇ?

ನಾವು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದವರು. ನಮ್ಮ ಸುತ್ತಮುತ್ತ ಎಲ್ಲಾ ತರಹದ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ, ಹಿಂಸೆ, ಅತ್ಯಾಚಾರ, ತಾರತಮ್ಯ, ಅವಮಾನ ನಡೆಯುತ್ತಿರುವುದು ನಿಮ್ಮ ಗಮನಕ್ಕೆ ಬಂದೇ ಇರುತ್ತದೆ. ಬಡವರು–ಶ್ರೀಮಂತರು; ಹುಡುಗಿಯರು–ವೃದ್ಧೆಯರು; ವಿಭಿನ್ನ ಜಾತಿ, ಉದ್ಯೋಗ, ಪ್ರಾಂತ್ಯ, ದೇಶ, ಧರ್ಮ, ಪಕ್ಷ, ಸಂಘಟನೆಗಳ ಮಹಿಳೆಯರು  ಇವರೆಲ್ಲರ ಮೇಲೆ ಬಗೆಬಗೆಯ ದೌರ್ಜನ್ಯ ನಡೆಯುತ್ತಲೇ ಇದೆ. ಇದು ಎಷ್ಟಕ್ಕೂ ನ್ಯಾಯವಲ್ಲ, ಸರಿ ಅಲ್ಲ. ಅದನ್ನು ತಡೆಗಟ್ಟಲೇಬೇಕು. ಆದರದು ಒಬ್ಬಿಬ್ಬರಿಂದ ಆಗುವ ಕೆಲಸ ಅಲ್ಲ. ಅದನ್ನು ಎಲ್ಲರೂ ಜೊತೆಸೇರಿ ಮಾಡಬೇಕು. ಎಂದೇ ಒಂದು ಸುಂದರ ಸಮಾಜ ಕಟ್ಟುವ ಕನಸಿನೊಂದಿಗೆ ನಾವೆಲ್ಲ ಜೊತೆಗೂಡಿ ಕೆಲಸ ಮಾಡುತ್ತಿದ್ದೇವೆ. ನಮ್ಮ ಜೊತೆಗೆ ನೀವೂ ಸೇರಿದರೆ, ನಮಗೆ ಹೊಸ ಉತ್ಸಾಹ, ಬಲ ಬರುತ್ತದೆ.

ನಿಮ್ಮೊಡನೆ ನಮ್ಮ ಅನುಭವ, ವಿಚಾರ, ಅನಿಸಿಕೆಗಳನ್ನು ಹಂಚಿಕೊಳ್ಳಲು ಈ ಪುಟ್ಟ ಪುಸ್ತಕ ಮಾಡಿದ್ದೇವೆ. ಇದರಲ್ಲಿ ನಮ್ಮ ಒಕ್ಕೂಟದ ಪರಿಚಯವಿದೆ. ಜೊತೆಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಚೆಲುವು, ಶ್ರಮದ ಮಹತ್ವ, ಪೋಕ್ಸೋ ಕಾಯಿದೆ, ಮುಟ್ಟು, ಮೆರಿಟ್, ದೇವದಾಸಿ ಪದ್ಧತಿ, ಜಾತಿ ತಾರತಮ್ಯ, ಬಾಲ್ಯ ವಿವಾಹ, ಗುಜ್ಜರ ಮದುವೆ, ತಾಯಿ ಮರಣ, ಶಾಲೆ ಬಿಡುವುದು ಮುಂತಾದ ವಿಚಾರಗಳ ಕುರಿತು ಕಿರುಬರಹಗಳಿವೆ. ನೀವು ಏನು ಮಾಡಬಹುದು ಎಂಬುದನ್ನು, ಬೇರೆ ಮಕ್ಕಳು ಮಾಡಿ ತೋರಿಸಿ, ತಿಳಿಸಿಕೊಟ್ಟ ಅಂಶಗಳನ್ನು ಕೂಡಾ ಕೊನೆಯಲ್ಲಿ ಇಟ್ಟಿದ್ದೇವೆ.

ನೀವೀಗ ವಿದ್ಯಾರ್ಥಿಗಳು, ಮಕ್ಕಳು. ನಿಮ್ಮ ಶಾಲೆ ಕೆಲಸ, ಪಾಠ, ಆಟ ಎಲ್ಲವನ್ನೂ ಸರಿಯಾಗಿ ಮಾಡಿಕೊಂಡೇ ಸಮಾಜದ ಬಗ್ಗೆ ಕೂಡಾ ಕಾಳಜಿ, ಚಿಂತನೆ ಬೆಳೆಸಿಕೊಳ್ಳಬಹುದು. ನಿಮ್ಮದೇ ಆದ ಚಿಕ್ಕಪುಟ್ಟ ಹೆಜ್ಜೆಗಳನ್ನು ಇಡುತ್ತಾ ತಿಳಿವನ್ನು ಹೆಚ್ಚಿಸಿಕೊಳ್ಳಬಹುದು. ಆ ಮೂಲಕ ನಮಗೂ, ಮುಂದಿನ ಕಾಲದ ಯುವಪೀಳಿಗೆಗೂ ನೀವೇ ಮಾದರಿಯಾಗಬಹುದು. ಇದು **ಅರಿವಿನ ಪಯಣ**. ಇದು ನಿರಂತರ ಪಯಣ.

ಈ ಕಿರುಹೊತ್ತಗೆಯನ್ನು ನೀವೂ ಓದಿ, ನಿಮ್ಮ ಸ್ನೇಹ ಬಳಗಕ್ಕೆ ಓದಿ ಹೇಳಿ, ಎಲ್ಲರೊಡನೆ ಈ ವಿಷಯಗಳನ್ನು ಚರ್ಚಿಸಿ. ಇದಕ್ಕೆ ನಿಮ್ಮ ಚಿಂತನೆಗಳನ್ನೂ ಸೇರಿಸಿ. ನಾವೆಲ್ಲ ಹೀಗೆ ಜಾಗೃತರಾಗಿ, ಅರಿವಿನ ದೊಂದಿಯ ಹಿಡಿದವರಾಗಿ, ಎಲ್ಲ ಒಟ್ಟಾಗಿ ನಿಂತೆವಾದರೆ ನಮ್ಮ ನಾಳೆಗಳು ಸುರಕ್ಷಿತವೂ, ಸುಂದರವೂ ಆಗುತ್ತವೆ.

ಏನು ಹೇಳುತ್ತೀರಿ?

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

ಭೂಮಿ ಮೇಲಿನ ಸಹಜೀವಿಯೂ, ಬದುಕಿನ ಸಹಪಯಣಿಗಳೂ ಆದ ಹೆಣ್ಣು, ಹೆಣ್ಣು ಎಂಬ ಕಾರಣಕ್ಕಾಗಿಯೇ ತಾರತಮ್ಯಕ್ಕೆ ಒಳಗಾಗಿರುವುದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ವ್ಯಕ್ತಿಯಾಗಿ ಅವಳ ಅಸ್ತಿತ್ವಕ್ಕೆ ಮತ್ತು ಅವಳ ದುಡಿಮೆಗೆ ಯಾವ ಬೆಲೆಯೂ ಇಲ್ಲದೆ ನಿರಂತರವಾಗಿ ಹಿಂಸೆ, ಕಿರುಕುಳ, ದೌರ್ಜನ್ಯಕ್ಕೆ ಒಳಗಾಗುತ್ತ ಬಂದಿದ್ದಾಳೆ. 2016ನೇ ಇಸವಿಯ ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆಯ ವರದಿ ಪ್ರಕಾರ ಭಾರತದಲ್ಲಿ ಪ್ರತಿ 77 ನಿಮಿಷಗಳಿಗೆ ಒಬ್ಬ ಮಹಿಳೆ ಹಿಂಸೆಯಿಂದ ಸಾಯುತ್ತಿದ್ದಾಳೆ. ಪ್ರತಿ 6 ಗಂಟೆಗೆ ಒಬ್ಬ ವಿವಾಹಿತ ಮಹಿಳೆಯನ್ನು ಜೀವಂತವಾಗಿ ಸುಡಲಾಗುತ್ತಿದೆ ಅಥವಾ ಹೊಡೆದು ಕೊಲ್ಲಲಾಗುತ್ತಿದೆ ಅಥವಾ ಆತ್ಮಹತ್ಯೆಗೆ ತಳ್ಳಲಾಗುತ್ತಿದೆ. ಜಾತಿ ಕಾರಣಕ್ಕಾಗೇ ಪ್ರತಿನಿತ್ಯ 3 ದಲಿತ ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿದೆ. ಮದುವೆಯಾದ 100ರಲ್ಲಿ 20 ಮಹಿಳೆಯರು ದಿನನಿತ್ಯ ಗಂಡನಿಂದ ಅಥವಾ ಕುಟುಂಬದವರಿಂದ ದೈಹಿಕ ಹಲ್ಲೆಗೆ ಗುರಿಯಾಗುತ್ತಿದ್ದಾರೆ. ಪ್ರತಿ 47 ನಿಮಿಷಕ್ಕೊಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಾಳೆ. ನಗರ ಪ್ರದೇಶದಲ್ಲಿ ಶೇ.96ರಷ್ಟು ಮಹಿಳಾ ಕಾರ್ಮಿಕರು ಒಂದಲ್ಲ ಒಂದು ಬಾರಿ ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ. ಅಪ್ರಾಪ್ತ ಹೆಣ್ಮಕ್ಕಳ ಮೇಲೆ ಅತ್ಯಾಚಾರ, ಆಸಿಡ್ ದಾಳಿ, ಬಿಸಿಯೆಣ್ಣೆ ಎರಚುವುದು ಹೆಚ್ಚುತ್ತಲೇ ಇದೆ. ಮಹಿಳೆಯರು ಮತ್ತು ಮಕ್ಕಳು ಮಾರಾಟದ ಸರಕಾಗಿದ್ದಾರೆ. ಇದರ ಜೊತೆಜೊತೆಗೇ ಇಂತಹ ಅನ್ಯಾಯ ಮತ್ತು ಅಸಮಾನತೆಯ ಕಾರಣಗಳನ್ನು ಗುರುತಿಸಿಕೊಂಡು ಅದರ ವಿರುದ್ಧ ಪ್ರತಿರೋಧದ ದನಿ ಎತ್ತುವುದರ ಜೊತೆಗೆ ಸಮಾನತೆಯನ್ನು ಆಧರಿಸಿದ ಸಮಾಜವನ್ನು ಕಟ್ಟುವ ಸಂಘಟಿತ ಪ್ರಯತ್ನಗಳನ್ನು ಮಹಿಳೆಯರು ಮಾಡುತ್ತ ಬಂದಿದ್ದಾರೆ.

ಕರ್ನಾಟಕದಲ್ಲೂ ಅನೇಕ ಸಂಘ–ಸಂಘಟನೆ–ಚಳುವಳಿಗಳು ಮಹಿಳಾ ಸಮಸ್ಯೆಗಳನ್ನೆತ್ತಿಕೊಂಡು ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿವೆ. ಅಂತಹ ಕರ್ನಾಟಕದ ಮಹಿಳಾಪರ ವ್ಯಕ್ತಿ–ಸಂಘ–ಸಂಘಟನೆಗಳ ಜಾಲವೇ 'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'. ಸಮತೆ–ಸೋದರಿತ್ವದ ಆಶಯ ಹೊತ್ತು ಅದು ಕಳೆದ ಆರು ವರ್ಷಗಳಿಂದ ತೊಡಗಿಕೊಂಡಿದೆ. ಪ್ರತಿ ವರ್ಷ ಕರ್ನಾಟಕದ ಒಂದೊಂದು ಜಿಲ್ಲಾ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 'ಮಹಿಳಾ ಚೈತನ್ಯ ದಿನ'ವೆಂದು ಆಚರಿಸುತ್ತ ಬಂದಿದೆ.

## ಒಕ್ಕೂಟದ ಹುಟ್ಟು – ಹಿನ್ನೆಲೆ

ಮಹಿಳೆಯರು ಮತ್ತು ಮಕ್ಕಳ ಮೇಲೆ ಹೆಚ್ಚಿದ ದೌರ್ಜನ್ಯಗಳು, ದೆಹಲಿಯ ನಿರ್ಭಯಾ ಪ್ರಕರಣ, ಮಂಗಳೂರಿನಲ್ಲಿ ನಡೆದ ಪಬ್ ದಾಳಿ, ಹೋಂ ಸ್ಟೇ ದಾಳಿಯಂತಹ ಪ್ರಕರಣಗಳು ನಮ್ಮ ಪ್ರಜಾತಂತ್ರದ ಮೂಲ ಆಶಯವಾದ ಸಮಾನತೆಯ ಮೌಲ್ಯಕ್ಕೆ ಧಕ್ಕೆಯುಂಟು ಮಾಡುತ್ತಿರುವುದು ಮಹಿಳಾಪರ ಮನಸ್ಸುಗಳಿಗೆ ಆಘಾತವನ್ನುಂಟುಮಾಡಿತು. ಇದು ಕೇವಲ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಆಘಾತವಾಗಿ ಉಳಿಯದೇ ಅಹಿಂಸಾತ್ಮಕವಾಗಿ, ಪ್ರಜಾಸತ್ತಾತ್ಮಕವಾಗಿ, ಕ್ರಿಯಾಶೀಲವಾಗಿ ಹಿಂಸೆ ಮತ್ತು ಅಸಮಾನತೆಯನ್ನು ಎದುರಿಸಲೇಬೇಕೆಂಬ ಇಚ್ಛೆಯು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವಾಗಿ ರೂಪುಗೊಂಡಿತು. ಈ ಒಕ್ಕೂಟಕ್ಕೆ ಕರ್ನಾಟಕದಾದ್ಯಂತ ಸಹೃದಯರ ಬೆಂಬಲ ಸಿಕ್ಕಿತು.

- ಮಂಗಳೂರಿನಲ್ಲಿ, 2013ರಲ್ಲಿ "ಇನ್ನು ಸಾಕು" ಎಂಬ ಘೋಷಣೆಯೊಂದಿಗೆ ವಿಚಾರ ಸಂಕಿರಣ, ಮೌನ ಪ್ರತಿಭಟನೆ, ಹಕ್ಕೊತ್ತಾಯ ಜಾಥಾ ಮತ್ತು ಸಾರ್ವಜನಿಕ ಸಭೆಯನ್ನು ಒಳಗೊಂಡ ಮೂರು ದಿನಗಳ ಸಮಾವೇಶ ನಡೆಸಲಾಯಿತು. ಕೆಲಸ ಮಾಡುವ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ಕಾಯ್ದೆಗೆ ಕಾರಣಕರ್ತರಾದ ಭಾಂವ್ರಿ ದೇವಿ ಮತ್ತು ಮಹಾರಾಷ್ಟ್ರದ ಖ್ಯಾತ ದಲಿತ ಲೇಖಕಿ ಊರ್ಮಿಳಾ ಪವಾರ್ ಅವರು ಸಮಾವೇಶದಲ್ಲಿ ವಿಶೇಷ ಅತಿಥಿಗಳಾಗಿ ಪಾಲ್ಗೊಂಡರು.
- 2014ರಲ್ಲಿ ಮೈಸೂರಿನ ಸೋದರಿಯರ ನೇತೃತ್ವದಲ್ಲಿ ನಡೆದ ಎರಡು ದಿನಗಳ ಸಮಾವೇಶದಲ್ಲಿ ಮಣಿಪುರದ ಮಿರಾಪೈಬಿ ಸಂಘಟನೆಯ ಇಮಾ ನಾನ್ಬಿ, ಚಿತ್ರಾ ಅಹೆಂತಮ್ ಮತ್ತು ರೇಣು ತಕಲೆಂಬಂ ಹಾಗೂ ಬೆಂಗಳೂರಿನ ವಿಮೋಚನಾ ಮಹಿಳಾ ಸಂಘಟನೆಯ ಕಾರಿನ್ ಕುಮಾರ್ ಅವರು ವಿಶೇಷ ಅತಿಥಿಗಳಾಗಿ ಪಾಲ್ಗೊಂಡರು.
- ಬೆಂಗಳೂರಿನ ಸೋದರಿಯರು ನಡೆಸಿದ 2015ರ ಸಮಾವೇಶದಲ್ಲಿ ಭೂಪಾಲ್ ಗ್ಯಾಸ್ ದುರಂತದ ಸಂತ್ರಸ್ತರಿಗಾಗಿ ದುಡಿಯುತ್ತಿರುವ ರಶೀದಾ ಬಿ ಮತ್ತು ಚಂಪಾದೇವಿ ಶುಕ್ಲಾ ಹಾಗೂ ಚೆನ್ನೈನ ವಿ. ಗೀತಾ ಅವರು ವಿಶೇಷ ಅತಿಥಿಗಳಾಗಿ ಭಾಗವಹಿಸಿದರು.
- ವಿಜಯಪುರದ ಸೋದರಿಯರು 2016ರಲ್ಲಿ ನಡೆಸಿದ ಸಮಾವೇಶಕ್ಕೆ ನರ್ಮದಾ ಬಚಾವೋ ಖ್ಯಾತಿಯ ಮೇಧಾ ಪಾಟ್ಕರ್ ಹಾಗೂ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾಲಯದ ಸಂದರ್ಶಕ ಪ್ರೊಫೆಸರ್ ಉಮಾ ಚಕ್ರವರ್ತಿಯವರು ಅತಿಥಿಗಳಾಗಿ ಆಗಮಿಸಿದರು.
- 2017ರಲ್ಲಿ ಕೊಪ್ಪಳದ ಸೋದರಿಯರು ಆಚರಿಸಿದ ಸಮಾವೇಶದಲ್ಲಿ ಐಪ್ವಾ ರಾಷ್ಟ್ರೀಯ ಮಹಿಳಾ ಸಂಘಟನೆಯ ಖ್ಯಾತ ಹೋರಾಟಗಾರ್ತಿ ಕವಿತಾ ಕೃಷ್ಣನ್ ಅವರು ಹಾಗೂ ಖ್ಯಾತ ದಲಿತ ಲೇಖಕಿ ಗೋಗು ಶ್ಯಾಮಲ ಅವರು ಅತಿಥಿಗಳಾಗಿ ಆಗಮಿಸಿದ್ದರು.
- ಶಿವಮೊಗ್ಗೆಯ ಸೋದರಿಯರ ನೇತೃತ್ವದಲ್ಲಿ ನಡೆದ 2018ರ ಸಮಾವೇಶಕ್ಕೆ ಮುಂಬೈನ ಖ್ಯಾತ ಮಹಿಳಾ ಹೋರಾಟಗಾರ್ತಿ ಮತ್ತು ವಕೀಲರಾದ ಫ್ಲೇವಿಯಾ ಆಗ್ನೆಸ್ ಹಾಗೂ ಮಹಾರಾಷ್ಟ್ರದ ಖ್ಯಾತ ಸಮಾಜವಾದಿ ಹೋರಾಟಗಾರ್ತಿ ಮನಿಷಾ ಗುಪ್ತೆ ಅವರು ಅತಿಥಿಗಳಾಗಿ ಆಗಮಿಸಿದ್ದರು.

ಎಲ್ಲ ಸಮಾವೇಶಗಳಲ್ಲೂ ರಾಜ್ಯದೆಲ್ಲೆಡೆಯಿಂದ ಐದು ಸಾವಿರಕ್ಕೆ ಕಡಿಮೆ ಇಲ್ಲದಂತೆ ಮಹಿಳೆಯರು ಭಾಗವಹಿಸಿದ್ದರಲ್ಲದೆ, ಕಾರ್ಯಕ್ರಮಗಳು ಅಭೂತಪೂರ್ವ ಯಶಸ್ಸು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕಂಡವು.ಯಾವ ಜಿಲ್ಲೆಯಲ್ಲಿ ಸಮಾವೇಶ ನಡೆಯುವುದೋ ಆ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರಲಾಗುತ್ತಿದೆ.ಅಂತಹ ಮಹಿಳಾ ಜಾಗೃತಿ ಕಾರ್ಯಕ್ರಮಗಳಲ್ಲಿ **'ಅರಿವಿನ ಪಯಣ'**ವೂ ಒಂದು.

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ನೂರಾರು ಸಂಘ ಸಂಸ್ಥೆಗಳನ್ನು ಜೊತೆ ಸೇರಿಸುವ ಒಂದು ದಾರ. ಸೋದರಿತ್ವ, ಸಾಮೂಹಿಕ ನ್ಯಾಯಕತ್ವ, ಪ್ರಜಾಸತ್ತಾತ್ಮಕ ಕಾರ್ಯತಂತ್ರವನ್ನು ಆಧರಿಸಿದ ಪ್ರೀತಿಯ ರಾಜಕಾರಣ ಒಕ್ಕೂಟದ್ದು. ಜನಪರ–ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಜಾತಿ–ಧರ್ಮ ಸಹಿಷ್ಣುತೆ ಇರುವ ಯಾರು ಬೇಕಾದರೂ ಒಕ್ಕೂಟದ ಭಾಗಿಯಾಗಬಹುದು. ಮಹಿಳಾ ಸಂಘಟನೆಗಳು, ಎಡಪಂಥೀಯ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಜನಪರ ಎನ್.ಜಿ.ಓ.ಗಳು, ಅಂಗನವಾಡಿ–ಪೌರಕಾರ್ಮಿಕ–ಬಿಸಿಯೂಟ–ಆಶಾ ಕಾರ್ಯಕರ್ತೆ–ಗಾರ್ಮೆಂಟ್–ಕಾರ್ಮಿಕರ ಸಂಘಟನೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ಅಕ್ಯಾಡೆಮಿಕ್ ವಲಯ, ರಂಗಕರ್ಮಿಗಳು ಇತ್ಯಾದಿಯಾಗಿ ಎಲ್ಲಾ ಸೇರಿದಂತೆ ಸುಮಾರು 160 ಸಂಘಟನೆಗಳು ಈ ಒಕ್ಕೂಟದ ಭಾಗಿಯಾಗಿವೆ.

ಸಮಾವೇಶಕ್ಕೆ ಅವಶ್ಯವಿರುವ ಹಣವನ್ನು ಹೇಗೆ ಸಂಗ್ರಹಿಸಬೇಕೆಂಬುದನ್ನು ರಾಜಕಾರಣದ ಭಾಗವಾಗಿ ಪರಿಗಣಿಸಿರುವ ಒಕ್ಕೂಟವು ಯಾವುದೇ ಸಾಂಸ್ಥೀಕೃತ, ದೊಡ್ಡ ಮೊತ್ತದನಿಧಿಯನ್ನು ತೆಗೆದುಕೊಳ್ಳದೆ ಸಾರ್ವಜನಿಕರಿಂದ, ಸಹೃದಯ ಸಂಘಟನೆಗಳಿಂದ ದೇಣಿಗೆ ಸಂಗ್ರಹಿಸುತ್ತದೆ. ಕಿರುಪುಸ್ತಿಕೆ, ಕರವಸ್ತ್ರಗಳನ್ನು ತಯಾರಿಸಿ ಮಾರಾಟಮಾಡಿ ಹಣ ಸಂಗ್ರಹಿಸಲಾಗುತ್ತದೆ. ಹಣದ ಲೆಕ್ಕವನ್ನು ಪ್ರಕಟಿಸಿ, ಉಳಿದ ಹಣವನ್ನು ಜನಪರ ಕಾರ್ಯಕ್ರಮಗಳಿಗೆ, ಮುಂದಿನ ಸಮಾವೇಶಕ್ಕೆ ವಿನಿಯೋಗಿಸಲಾಗುತ್ತದೆ. ನಮ್ಮ ಪ್ರಯತ್ನಕ್ಕೆ ಸಾರ್ವಜನಿಕರು ಮತ್ತು ಸಹೃದಯರು ಅಪಾರವಾಗಿ ಬೆಂಬಲಿಸಿದ್ದಾರೆ.

ಈ ವರ್ಷ ಕರ್ನಾಟಕದ ಎಲ್ಲೆಡೆಯಿಂದ ಬಂದು ನಾವು ಧಾರವಾಡದ ಸಂಗಾತಿಗಳ ಜೊತೆ ಸೇರಿ ನಿಮ್ಮ ಜಿಲ್ಲೆಯಲ್ಲಿ ಕೆಲಸ ಮಾಡಲಿದ್ದೇವೆ. 2019, ಮಾರ್ಚ 8ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಧಾರವಾಡದಲ್ಲಿ ಆಚರಿಸಲಿದ್ದೇವೆ.

## ಮಹಿಳಾ ದಿನಾಚರಣೆಯ ಇತಿಹಾಸ

ತಮ್ಮ ಶ್ರಮ, ಸೇವೆ, ಜಾಣ್ಮೆ, ಜ್ಞಾನ, ಕೌಶಲ್ಯಗಳ ಮೂಲಕ ಸಮಾಜಕ್ಕೆ ಅಪಾರ ಕೊಡುಗೆಯನ್ನು ನೀಡುತ್ತ ಬಂದಿದ್ದರೂ ಮಹಿಳೆಯರು ತಾರತಮ್ಯಕ್ಕೆ ಒಳಗಾಗಿದ್ದಾರೆ. ಮಹಿಳೆಯರ ಕೊಡುಗೆಯನ್ನಿರಲಿ, ತಾರತಮ್ಯದ ವಿರುದ್ಧ ಅವರು ಎತ್ತಿದ ದನಿಯೂ ಇತಿಹಾಸದಲ್ಲಿ ದಾಖಲಾಗುವುದಿಲ್ಲ. ಮಹಿಳೆಯರ ಕೊಡುಗೆಯ ಜೊತೆಗೆ ಅವರ ಹೋರಾಟದ ದನಿಯನ್ನು ದಾಖಲಿಸುವುದನ್ನು ಒಕ್ಕೂಟವು ಮುಖ್ಯವೆಂದು ಭಾವಿಸುತ್ತದೆ. ಮಾರ್ಚ್

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

8ನ್ನು ಮಹಿಳಾ ದಿನಾಚರಣೆಯನ್ನಾಗಿ ಆಚರಿಸುವುದರ ಹಿಂದೆಯೂ ಮಹಿಳಾ ಹೋರಾಟದ ಕತೆಯಿದೆ. ನ್ಯೂಯಾರ್ಕ್ ನಗರದ ಬಟ್ಟೆ ಗಿರಣಿಗಳಲ್ಲಿ ಜೀತಗಾರರಂತೆ ದುಡಿಯುತ್ತಿದ್ದ ಮಹಿಳೆಯರು ಉತ್ತಮ ವೇತನ ಮತ್ತು ದುಡಿಮೆಯ ಅವಧಿಯನ್ನು ಕಡಿತಗೊಳಿಸಬೇಕೆಂದು ಒತ್ತಾಯಿಸಿ ಬೀದಿಗಿಳಿದು ಪ್ರತಿಭಟಿಸಿದರು. ಹೀಗೆ ಪ್ರತಿಭಟಿಸಿದ ಮಹಿಳೆಯರನ್ನು ಗುಂಡಿಟ್ಟು ಹತ್ಯೆ ಮಾಡಲಾಯಿತು. ಈ ಮಹಿಳೆಯರ ಸ್ಮರಣಾರ್ಥ ಮಾರ್ಚ್ 8ನೇ ತಾರೀಖಿನಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಾಗಿ ಆಚರಿಸಲು, ರಷ್ಯಾದ ಕಮ್ಯೂನಿಸ್ಟ್ ಹೋರಾಟಗಾರ್ತಿ ಕ್ಲಾರಾ ಜೆಟ್ಕಿನ್ ಅವರು, 17 ದೇಶದ 100 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದ ಸೆಕೆಂಡ್ ಸೋಷಿಯಲಿಸ್ಟ್ ಇಂಟರ್‌ನ್ಯಾಷನಲ್‌ನ (ಕೋಪನ್ ಹೇಗನ್, ಡೆನ್ಮಾರ್ಕ್) ಮುಂದಿಟ್ಟರು. ಎಲ್ಲರ ಸಮ್ಮತಿಯ ಮೇರೆಗೆ 1910ರಿಂದ ಮಾರ್ಚ್ 8ನ್ನು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಾಗಿ ಆಚರಿಸುವುದು ಜಾರಿಗೆ ಬಂದಿತು.

ಭಾರತದಲ್ಲಿ 1972ರಲ್ಲಿ, ಮಹಾರಾಷ್ಟ್ರದ ಗಡ್‌ಚಿರೋಲಿ ಎಂಬ ಗ್ರಾಮದ ಪೊಲೀಸ್ ಠಾಣೆಯಲ್ಲಿ 16ವಯಸ್ಸಿನ ಆದಿವಾಸಿ ಬಾಲಕಿಯ ಮೇಲೆ ಅತ್ಯಾಚಾರ ನಡೆದ ಸಂದರ್ಭದಲ್ಲಿ ದೇಶಾದ್ಯಂತ ಪ್ರತಿಭಟನೆಗಳು ನಡೆದವು. ಮತ್ತು ಮಹಿಳೆಯರ ಮಾನವಹಕ್ಕುಗಳಿಗಾಗಿ ಹುಟ್ಟಿಕೊಂಡ ಮಹಿಳಾ ಸಂಘಟನೆಗಳು ಚಳುವಳಿಯ ಸ್ವರೂಪಪಡೆದುಕೊಂಡವು. ಅಂದಿನಿಂದಲೂ ದೇಹ ರಾಜಕಾರಣ, ಸಮುದಾಯ ರಾಜಕಾರಣ, ಸಾಮಾಜಿಕ ರಾಜಕಾರಣ ಹಾಗೂ ಲಭ್ಯತೆಯ ರಾಜಕಾರಣ ಎಂಬ ನಾಲ್ಕು ಮುಖ್ಯ ನೆಲೆಗಳಲ್ಲಿ ಮಹಿಳೆಯರ ಮೇಲೆ ಲಿಂಗ, ಜಾತಿ, ಧರ್ಮ, ವರ್ಗದ ಹೆಸರಿನಲ್ಲಿ ನಡೆಯುವ ಹಿಂಸೆ ಮತ್ತು ದೌರ್ಜನ್ಯವನ್ನು ಪ್ರಶ್ನಿಸುವ ಹಾಗೂ ತಡೆಯುವ ಕೆಲಸಗಳನ್ನು; ಸಮಾನ ವೇತನ, ಆಸ್ತಿ ಹಕ್ಕು, ಸಂಪನ್ಮೂಲಗಳ ಮೇಲಿನ ಹಿಡಿತ ಮತ್ತು ರಾಜಕೀಯ ಪ್ರಾತಿನಿಧ್ಯಕ್ಕಾಗಿ ಹೋರಾಟವನ್ನು ಮಾಡಿಕೊಂಡು ಬಂದಿವೆ. ಮಾರ್ಚ್ 8 ಮಹಿಳಾ ದಿನಾಚರಣೆಯನ್ನು ಸಂಭ್ರಮ ಮತ್ತು ಸಾಧನೆಯ ದಿನವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಅಂದಿನಿಂದಲೂ ಕುಟುಂಬ ಮತ್ತು ಸಮಾಜಕ್ಕಾಗಿ ಶ್ರಮಿಸುವ ಮಹಿಳೆಯರನ್ನು, ಸಮಾಜವೂ ಪ್ರತಿಯಾಗಿ ಗೌರವಿಸುವುದಕ್ಕೆ ಇದೊಂದು ಸಂದರ್ಭವಾಗಿದೆ.ಮಹಿಳೆಯರಿಗೆ ತಮ್ಮ ಒಳಿತಿನ ಕುರಿತು, ತಮ್ಮೆದುರಿಗಿರುವ ಸವಾಲುಗಳ ಕುರಿತು ಹಾಗೂ ತಮಗಿರುವ ಅಪಾರ ಶಕ್ತಿ, ಸಾಮರ್ಥ್ಯ ಮತ್ತು ಸಾಧ್ಯತೆಗಳ ಕುರಿತು ಆಲೋಚಿಸಲು 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ' ಅವಕಾಶ ಒದಗಿಸುತ್ತದೆ.

ಆದ್ದರಿಂದಲೇ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವೂ ಕೂಡಾ ಪ್ರತಿವರ್ಷ ಮಹಿಳಾ ದಿನವನ್ನು ವಿಶಿಷ್ಟವಾಗಿ ಆಚರಿಸುತ್ತಾ ಬಂದಿದೆ. ಈ ವರ್ಷ ಧಾರವಾಡ ಜಿಲ್ಲೆಯಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲಿದ್ದು ಅದಕ್ಕೆ ಸಿದ್ಧತೆಯಾಗಿ 'ಅರಿವಿನ ಪಯಣ' ಅಭಿಯಾನ ನಡೆಯುತ್ತಿದೆ. ಇದರಲ್ಲಿರುವ ಎಲ್ಲಾ ವಿಚಾರಗಳನ್ನೂ ಗಮನಿಸಿ, ಪ್ರಶ್ನೆಗಳಿದ್ದರೆ ಚರ್ಚಿಸಿ. ಎಲ್ಲ ಮಹಿಳೆಯರ ಒಳಿತಿಗಾಗಿ ಶ್ರಮಿಸುತ್ತಿರುವ ಮಹಿಳಾ ಒಕ್ಕೂಟದೊಂದಿಗೆ ಕೈಜೋಡಿಸಿ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ‘ನಾನೂ ಸಹ’ – ಪೋಕ್ಸೋ

## ಮೌನ ಮುರಿದು ಕಿರುಕುಳ ಎದುರಿಸಿ

ಕುಸುಮ ಒಂಭತ್ತನೇ ತರಗತಿಯಲ್ಲಿ ಓದುತ್ತಿದ್ದಾಳೆ. ಶಾಲೆಗೆ ಹೋಗುವ ಮೊದಲು ಅವಳು ಅಮ್ಮನಿಗೆ ಮನೆಕೆಲಸದಲ್ಲಿ ಸಹಾಯ ಮಾಡುತ್ತಾಳೆ. ಅವಳ ಮನೆ ಪಕ್ಕದಲ್ಲಿ ಒಂದು ಅಂಗಡಿ ಇದೆ. ಆ ಅಂಗಡಿಯನ್ನು ನಡೆಸುವ ಮಧ್ಯ ವಯಸ್ಸಿನ ಅಂಕಲ್ ಅಮ್ಮನಿಗೆ ದೂರದ ಸಂಬಂಧಿ. ಅಂಕಲ್‌ಗೆ ಕುಸುಮಳ ಕಂಡರೆ ಬಹಳ ಕಾಳಜಿ, ಪ್ರೀತಿ. ಸಂಜೆ ಹೊತ್ತು ಮನೆಗೆ ಬಂದು ಪಾಠ ಹೇಳಿಕೊಡುತ್ತಾನೆ.

ಒಂದುದಿನ.. ಇವತ್ತು ಮನೆಗೆ ಬರುವುದಕ್ಕೆ ಸಮಯವಿಲ್ಲ ಅಂತ ಹೇಳಿ ಅಂಕಲ್ ಕುಸುಮಳನ್ನು ಮನೆಗೇ ಕರೆಸಿಕೊಳ್ಳುತ್ತಾನೆ. ಅವಳಿಗೊಂದು ಪುಟ್ಟ ಗಿಫ್ಟ್ ಕೊಡುತ್ತಾರೆ. ಆದರೆ ಅವತ್ತಿನ ಅವರ ವರ್ತನೆ ಅವಳಿಗೆ ಸರಿಹೋಗುವುದಿಲ್ಲ. ಸುಮ್ಮಸುಮ್ಮನೇ ಅಲ್ಲಿಇಲ್ಲಿ ಮುಟ್ಟುತ್ತಾ, ಸವರುತ್ತಾ ಮುದ್ದಿಸುವುದು ಅವಳಿಗೆ ಕಸಿವಿಸಿ ಆಗುತ್ತದೆ. ಅವರು ಹೀಗೇ ಆಗಾಗ ಕರೆಯತೊಡಗುತ್ತಾರೆ. ಹೋದಾಗಲೆಲ್ಲಾ ಗಿಫ್ಟು, ಅದರ ಜೊತೆಗೇ ಎಲ್ಲೆಲ್ಲೋ ಮುಟ್ಟುತ್ತಾರೆ, ಹತ್ತಿರ ಬರುತ್ತಾರೆ. ಕಿರಿಕಿರಿ..

ಅವಳಿಗೆ ಹೋಗಲೂ ಇಷ್ಟವಿಲ್ಲ, ಹಾಗೆಂದು ಕರೆದಾಗ ಹೋಗದಿರುವುದಕ್ಕೂ ಭಯ. ಅವರ ಮನೆಗೆ ಈ ಅಂಕಲಿನದೇ ದೊಡ್ಡ ಸಹಾಯ. ಯಾರ ಬಳಿ ಹೇಳುವುದಕ್ಕೂ ಆಗುವುದಿಲ್ಲ. ಸಹಿಸಿಕೊಳ್ಳುವುದಕ್ಕೂ ಆಗುವುದಿಲ್ಲ. ಬೇಸರದಿಂದ ಇರುತ್ತಾಳೆ..

ಅವಳ ಗೆಳತಿಯರು ಇದನ್ನು ಗಮನಿಸಿ ಅವಳ ಬಳಿ ವಿಚಾರಿಸುತ್ತಾರೆ. ವಿಷಯ ತಿಳಿದ ಮೇಲೆ ಎಲ್ಲರೂ ಸೇರಿ ಒಂದು ಉಪಾಯ ಮಾಡುತ್ತಾರೆ. ಮುಂದಿನ ಸಾರಿ ಅಂಕಲ್ ಕರೆದಾಗ, ‘ನಮಗೂ ಪಾಠ ಹೇಳಿಕೊಡಿ ಅಂಕಲ್’ ಅಂತ ಎಲ್ಲರೂ ಜೊತೆಯಾಗಿ ಹೋಗುತ್ತಾರೆ. ಅಂಕಲ್‌ಗೆ ಸ್ವಲ್ಪ ಕಸಿವಿಸಿ ಆಗುತ್ತದೆ. ಮತ್ತೊಮ್ಮೆ ಕರೆದಾಗಲೂ ಹುಡುಗಿಯರು ಹೀಗೆಯೇ ಮಾಡುತ್ತಾರೆ. ಅಂಕಲ್‌ಗೆ ತಮ್ಮ ಬಣ್ಣ ಬಯಲಾಯಿತು ಎಂದು ಭಯವಾಗುತ್ತದೆ. ಮತ್ತೆ ಕರೆಸಿಕೊಳ್ಳುವುದಿಲ್ಲ.

ಹೌದು, ನಾವು ಮಾಡದ ತಪ್ಪಿಗೆ ನಮ್ಮನ್ನು ಮಾನಸಿಕವಾಗಿ, ದೈಹಿಕವಾಗಿ ನೋಯಿಸುವ, ಕುಗ್ಗಿಸುವ ಅತ್ಯಂತ ಹೀನಾಯ ಸಾಮಾಜಿಕ ಪಿಡುಗು “ಲೈಂಗಿಕ ಕಿರುಕುಳ”. ಈ ಕಿರುಕುಳವು ಅತ್ಯಾಚಾರದ ತನಕ ಮುಂದುವರೆಯಬಹುದು. ಇಂತಹ ಲೈಂಗಿಕ ಕಿರುಕುಳ, ದೌರ್ಜನ್ಯಗಳು ಬಾಲಕಿ, ಮಹಿಳೆಯರಿಗೆ ಮಾತ್ರವಲ್ಲ, ಬಾಲಕರ ಮೇಲೆ ಕೂಡಾ ನಡೆಯುತ್ತದೆ. ಬೇಸರದ ಸಂಗತಿಯೆಂದರೆ ಇಲ್ಲಿ ತಪ್ಪು ಮಾಡಿದವರು ತಪ್ಪಿಸಿಕೊಳ್ಳುತ್ತಾರೆ. ಕಿರುಕುಳಕ್ಕೆ ಬಲಿಯಾದವರೇ ಮತ್ತೆಮತ್ತೆ ಅವಮಾನ, ಶಿಕ್ಷೆ ಅನುಭವಿಸುತ್ತಾರೆ. ಅದಕ್ಕಾಗಿಯೇ ಇದರ ಬಗ್ಗೆ ಒಂದು ಭಯಂಕರ ಮೌನ ನಮ್ಮ ಸಮಾಜದಲ್ಲಿ ಇದೆ. ಮಾನಮರ್ಯಾದೆಗೆ ಅಂಜಿ ಕಿರುಕುಳ ಎದುರಿಸಿದವರು ಮೌನವಾಗುತ್ತೇವೆ. ಆದರೆ ಸುಮ್ಮನಿರುವುದರಿಂದ ನಮ್ಮ ಹಕ್ಕನ್ನು ನಾವೇ ಕಳೆದುಕೊಂಡುಬಿಡುತ್ತೇವೆ. ಇದು ಸರಿಯಲ್ಲ, ನಾವು ಮೌನ ಮುರಿಯಲು ಕಲಿಯಲೇಬೇಕು, ನಾವು ಮೌನವಾಗಿರುವುದರಿಂದಲೇ ಕಿರುಕುಳ ಹೆಚ್ಚುಹೆಚ್ಚು ನಡೆಯುತ್ತಿದೆ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹೌದು, ಮೌನ ಮುರಿಯಲೇ ಬೇಕು. ಯಾರೋ ಮುಟ್ಟಿದ್ದಕ್ಕೆ, ಏನೋ ಮಾಡಿದ್ದಕ್ಕೆ ನಾವು ಕೆಟ್ಟುಹೋದೆವು ಅಂತ ಅಂದುಕೊಳ್ಳಬಾರದು. ಹುಡುಗ, ಹುಡುಗಿ ಯಾರದೇ ಆಗಲಿ, **ಬಾಯಿ, ಎದೆ, ತೊಡೆಯ ಮುಂಬದಿಯ ಸಂದಿ, ಹಿಂಬದಿಯ ಪೃಷ್ಠಭಾಗ**ವನ್ನು ತಾಯಿ ತಂದೆಯ ಹೊರತಾಗಿ ಇನ್ಯಾರೂ ಮುಟ್ಟಬಾರದು. ಅವರ ಎದುರಿನಲ್ಲಿ ವೈದ್ಯರು ತಪಾಸಣೆಗೆ ಮಾತ್ರ ಮುಟ್ಟಬಹುದು. ಇದು ಗುಡ್ ಟಚ್, ಒಳ್ಳೆಯ ಸ್ಪರ್ಶ. ದೇಹದ ಆ ನಾಲ್ಕು ಭಾಗಗಳನ್ನು ಮುಟ್ಟಲು ಉಳಿದ ಯಾರಿಗೂ ಅವಕಾಶವಿಲ್ಲ. ನಿಮಗಿಷ್ಟವಾಗುವುದಿಲ್ಲ ಎಂದರೆ ನಿಮ್ಮ ದೇಹದ ಭಾಗಗಳನ್ನು ಬೇರೆ ಯಾರೂ ಮುಟ್ಟುವಂತಿಲ್ಲ. ಅದು ಬ್ಯಾಡ್ ಟಚ್, ಕೆಟ್ಟ ಸ್ಪರ್ಶ. ಎಂದೇ ನಿಮಗಿಷ್ಟವಿಲ್ಲದ ಕಡೆ ಮುಟ್ಟಿದರೆ, ನಿಮಗಿಷ್ಟವಿಲ್ಲದ್ದು ನಡೆದರೆ **'ಬೇಡ'** ಎಂದು ಕೂಗಿ ಹೇಳಲು ನೆನಪಿಡಿ.

**ಪೊಕ್ಸೋ**

ಲೈಂಗಿಕ ದೌರ್ಜನ್ಯವೆಂದರೆ:

- ಯಾವುದೇ ತರಹದ ಲೈಂಗಿಕ ಸ್ವರೂಪದ ಅನುಚಿತವಾದ, ಅಶ್ಲೀಲವಾದ ಮಾತಿನ ಅಥವಾ ಮಾತಿನ ಮೂಲಕವಲ್ಲದ ಆಂಗಿಕ ನಡವಳಿಕೆ. (ಉದಾ: ತಮ್ಮ ಗುಪ್ತಾಂಗಗಳನ್ನು ತೋರಿಸುವುದು)
- ಒತ್ತಾಯವಾಗಿ ದೇಹದ ಒಳ, ಹೊರಭಾಗಗಳನ್ನು ಮುಟ್ಟುವುದು, ಸವರುವುದು, ದೈಹಿಕ ಸಂಪರ್ಕ ನಡೆಸುವುದು.
- ಲೈಂಗಿಕ ಸಂದೇಶವುಳ್ಳ ಸಂಕೇತಗಳನ್ನು ಮಾಡುವುದು
- ಅಶ್ಲೀಲ ಸಾಹಿತ್ಯ ಅಥವಾ ಚಿತ್ರಗಳನ್ನು ತೋರಿಸುವುದು

ಈ ಮೇಲೆ ಹೇಳಿದ ಯಾವುದಾದರೂ ನಡೆದರೆ ಅದನ್ನು ಕಾನೂನಿನ ಪ್ರಕಾರ ಲೈಂಗಿಕ ದೌರ್ಜನ್ಯ ಎನ್ನುತ್ತಾರೆ. 16 ವರುಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಜತೆಗೆ ಇಂಥ ವರ್ತನೆ ನಡೆಸಿದರೆ ಅಂಥವರಿಗೆ ಕಠಿಣ ಶಿಕ್ಷೆಯಿದೆ. 1992ನೇ ಇಸವಿಯಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತವು ಸಹಿ ಹಾಕಿದೆ. ಮಕ್ಕಳನ್ನ ಮಾನಸಿಕ, ದೈಹಿಕ ಹಿಂಸೆಯಿಂದ ಹಾಗೂ ಲೈಂಗಿಕ ಶೋಷಣೆಯೂ ಒಳಗೊಂಡಂತೆ ಎಲ್ಲ ಬಗೆಯ ಶೋಷಣೆಯಿಂದ ರಕ್ಷಿಸಲು ಅದು ಬದ್ಧವಾಗಿದೆ.

ಈ ಹಿನ್ನೆಲೆಯಲ್ಲಿ ಲೈಂಗಿಕ ಶೋಷಣೆಯಂತಹ ಘೋರ ಕೃತ್ಯಕ್ಕೆ ಕಡಿವಾಣ ಹಾಕಲು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ –2012 (ಪ್ರೊಟೆಕ್ಷನ್ ಆಫ್ ಚಿಲ್ಡ್ರನ್ ಫ್ರಮ್ ಸೆಕ್ಷುವಲ್ ಅಫೆನ್ಸಸ್ ಆಕ್ಟ್ 2012 – ಪೊಕ್ಸೊ)ವನ್ನು ಕೇಂದ್ರ ಸರಕಾರ ಜಾರಿಗೆ ತಂದಿದೆ. ಇದರ ಪ್ರಕಾರ 18 ವರುಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಜತೆಗಿನ ಲೈಂಗಿಕ ಸಂಪರ್ಕ, ಅದು ಒಪ್ಪಿಗೆಯಿಂದ ನಡೆದಿದ್ದರೂ ಸಹ, ಕ್ರಿಮಿನಲ್ ಅಪರಾಧವಾಗಿದೆ. ಅವರಿಗೆ 5ರಿಂದ 8 ವರ್ಷ ಜೈಲು, ದಂಡ ಮತ್ತಿತರ ಶಿಕ್ಷೆಯಿದೆ. ಅಪರಾಧ ಎಸಗುವಲ್ಲಿ ಯಾವುದೇ ರೀತಿಯಿಂದ ಭಾಗಿಯಾದ ಎಲ್ಲರೂ ಅಪರಾಧಿಗಳೆನಿಸುವರು. ಈ ಅಪರಾಧಗಳು ನಡೆದ ಬಗ್ಗೆ ಮಾಹಿತಿ ಇದ್ದು, ದೂರು ಕೊಡದವರು ಕೂಡಾ ತಪ್ಪಿತಸ್ಥರು.ಅಂಥವರು ಅಪರಾಧಿಗೆ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನೀಡುವ ಶಿಕ್ಷೆಯ ಅರ್ಧದಷ್ಟು ಶಿಕ್ಷೆಯನ್ನು ಅನುಭವಿಸಬೇಕು.

ನಾವೆಲ್ಲರೂ ಭಯಪಡುವುದು ಬಿಟ್ಟು ನಮ್ಮನಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆಂದು ಕಲಿಯಬೇಕು. ಆರೋಗ್ಯವಂತರಾಗಿ, ಸಧೃಢರಾಗಿ ಬೆಳೆಯಬೇಕು. ವ್ಯಾಯಾಮ, ಕರಾಟೆ ಕಲಿಯಬೇಕು. ಅಮೆರಿಕದ ಸಿನಿಮಾ ನಟಿಯೊಬ್ಬಳ ಮೇಲೆ ದೌರ್ಜನ್ಯ ನಡೆದ ಬಳಿಕ ಸಹ ('ಮಿ ಟೂ') ಎಂಬ ಅಭಿಯಾನ ಮಹಿಳೆಯರಿಂದ ಶುರುವಾಗಿತ್ತು, ಈಗ ಭಾರತದಲ್ಲೂ ಶುರುವಾಗಿದೆ. ತಮಗೆ ಆದ ದೌರ್ಜನ್ಯದ ಕುರಿತು ಮೇಲ್ವರ್ಗದ ಮಹಿಳೆಯರು ಸಂಕೋಚ, ಭಯವಿಲ್ಲದೆ ಹೇಳಿಕೊಳ್ಳತೊಡಗಿದ್ದಾರೆ. ಯಾರನ್ನು ಸಮಾಜ 'ಗಣ್ಯಪುರುಷ'ರೆಂದು ಭಾವಿಸಿತ್ತೋ ಅವರ ವಂಚನೆ, ಕಾಮುಕತನ ಒಂದೊಂದಾಗಿ ಬಯಲಿಗೆ ಬರತೊಡಗಿದೆ. ಮಾಧ್ಯಮ ಮತ್ತು ಸಿನಿಮಾದ ಮಹಿಳೆಯರ ಮೇಲೆ ಹೇಗೋ, ಅದೇರೀತಿ ಕೆಳವರ್ಗ, ಮಧ್ಯಮ ವರ್ಗದ ನಾನಾ ಉದ್ಯೋಗಗಳ ಲಕ್ಷಾಂತರ ಮಹಿಳೆಯರು ತಮ್ಮ ಮೇಲೆ ದೌರ್ಜನ್ಯ ನಡೆದರೂ ಹೇಳಿಕೊಳ್ಳಲಾರದೇ ಇದ್ದಾರೆ. ನಮ್ಮ ನಡುವಿನ ಅಂಥ ಎಲ್ಲ ದನಿಯಿಲ್ಲದ ಮಹಿಳೆಯರಿಗೂ 'ಮಿ ಟೂ' ಅಭಿಯಾನ ವಿಸ್ತರಿಸುವುದಾದರೆ, ಅವರೆಲ್ಲರ ದನಿಯಾಗಬಲ್ಲುದಾದರೆ ಆಗ ಇದು ಬೃಹತ್ ಚಳುವಳಿಯ ರೂಪ ಪಡೆದು ಎಲ್ಲ ಮಹಿಳೆಯರ ನೋವಿಗೂ ಪರಿಹಾರವಾಗಬಲ್ಲದು.

**ನೆನಪಿರಲಿ:**

- ನಾನು ಕೆಟ್ಟು ಹೋದೆನೆಂದು ನಿಮಗೆ ನೀವೇ ಭಾವಿಸಬೇಡಿ.
- ತಪ್ಪು ಮಾಡಿದವರು ತಲೆ ತಗ್ಗಿಸಬೇಕೇ ಹೊರತು, ನೋವು ಅನುಭವಿಸಿದವರಲ್ಲ.
- ಹಿಂಬಾಲಿಸಿ ಬರುವವರಿಗೆ, ಹೊಗಳುತ್ತ ರಮಿಸುತ್ತ ಮುಟ್ಟಬರುವವರಿಗೆ, ವಸ್ತುಗಳನ್ನು ಕೊಟ್ಟು ನಿಮ್ಮ ಮನವೊಲಿಸಿಕೊಳ್ಳಬರುವವರಿಗೆ, ಕಿರುಕುಳ ಮಾಡುವವರಿಗೆ ನೀವು ಸ್ಪಷ್ಟವಾಗಿ ನನಗಿದು ಇಷ್ಟವಿಲ್ಲ ಎಂದು ಹೇಳಲು ಕಲಿಯಬೇಕು.
- ಏನೇ ಹೇಳಿ ಹೆದರಿಸಿದರೂ, ಹೆದರಿ ಬಾಯಿ ಮುಚ್ಚಿಕೊಂಡು ಇರಬಾರದು. ನಿಮ್ಮ ಪಾಲಕರ ಬಳಿ, ನಂಬಿಕೆಯಿರುವ ಗುರು–ಹಿರಿಯರ ಅಥವಾ ಸ್ನೇಹಿತ/ತೆಯರ ಬಳಿ ಹೇಳಬೇಕು.
- ಸಾಧಾರಣವಾಗಿ ಕಿರುಕುಳ ಕೊಡುವ ವ್ಯಕ್ತಿಗೆ ನಾವು ಯಾರಲ್ಲೂ ಹೇಳುವುದಿಲ್ಲ ಎಂಬ ಧೈರ್ಯ ಇರುತ್ತದೆ. ಅದಕ್ಕಾಗಿ ಅವರು ಕೆಟ್ಟ ಕೆಲಸ ಮಾಡಲು ಹಿಂಜರಿಯುವುದಿಲ್ಲ. ನಾವು ಹೇಳುತ್ತೇವೆ ಎಂದು ಗೊತ್ತಾದರೆ ಇಂತಹ ಸಮಸ್ಯೆಗಳು ಕಡಿಮೆ ಆಗಿಯೇ ಆಗುತ್ತದೆ. ಧೈರ್ಯವೇ ಮೂಲಮಂತ್ರ.
- ಒಟ್ಟಿನಲ್ಲಿ ಮೌನವಾಗಿರಬೇಡಿ. ಅನ್ಯಾಯದ ವಿರುದ್ಧ ದನಿಯೆತ್ತಿ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಕಪ್ಪು ಬಲೂನ್ ಕೂಡಾ ಹಾರುತ್ತಾ?

ನಿಮ್ಮಿ ಒಬ್ಬ ಪುಟ್ಟ ಹುಡುಗಿ; ತನ್ನ ತಂದೆಯ ಕೈ ಹಿಡಿದುಕೊಂಡು ಜಾತ್ರೆಯಲ್ಲಿ ಸುತ್ತಾಡುತ್ತಿದ್ದಳು. ಬಲೂನ್ ಮಾರುವವನ ಪಕ್ಕಕ್ಕೆ ತಂದೆ ಮಗಳಿಬ್ಬರು ಹೋದರು. ಬಣ್ಣಬಣ್ಣದ ಬಲೂನುಗಳನ್ನು ದಾರದಲ್ಲಿ ಹಿಡಿದಿಟ್ಟು ನಿಂತಿದ್ದ ಆತ. ನಿಮ್ಮಿ ಬಲೂನ್ ಮಾರುವವನ ಬಳಿ ಕೇಳಿದಳು.

"ಮಾಮ, ಆ ಕೆಂಪು ಬಲೂನ್ ಗಾಳಿಗೆ ಬಿಟ್ಟರೆ ಮೇಲಕ್ಕೆ ಹಾರುತ್ತಾ?"

"ಹಾಂ ಹಾರುತ್ತೆ," ಎಂದ ಆತ.

"ಹಾಗಾದರೆ ಆ ನೀಲಿ ಬಲೂನ್ ಇದೆಯಲ್ಲಾ, ಅದು ಕೂಡಾ ಹಾರುತ್ತಾ?", ಮತ್ತೆ ಕೇಳಿದಳಾಕೆ.

"ಹೌದು, ಅದೂ ಹಾರುತ್ತೆ," ಎಂದ ಆತ.

"ಓಹೋ!ಹಾಗಾದರೆ ಆ ಹಳದಿ ಬಲೂನ್?"ಏನೋ ಅನುಮಾನದಿಂದ ಮತ್ತೆ ಕೇಳಿದಳು ಅವಳು.ಅಷ್ಟಕ್ಕೇ ನಿಲ್ಲಿಸದೆ, "ಕಪ್ಪು ಬಲೂನ್ ಕೂಡಾ ಹಾರುತ್ತಾ?" ಎಂದಳು.

ತಂದೆಗೆ ಮಗಳು ಯಾಕೆ ಹೀಗೆ ಕೇಳುತ್ತಿದ್ದಾಳೆ ಎಂದು ಸ್ವಲ್ಪ ಆಶ್ಚರ್ಯವಾಯಿತು. ತಕ್ಷಣ ಅರ್ಥವಾಯಿತು.

"ಮಗಳೇ, ಬಲೂನಿನ ಬಣ್ಣ ಯಾವುದೇ ಇರಲಿ ಅದು ಹಾರುತ್ತದೆ. ಹಾರುವ ಶಕ್ತಿ ಬರುವುದು ಅದರ ಬಣ್ಣದ ಕಾರಣದಿಂದಲ್ಲ, ಅದರ ಒಳಗಿನ ಗಾಳಿಯ ಕಾರಣದಿಂದ. ಹೊರಗೆ ಕಾಣುವ ಬಣ್ಣ ಮುಖ್ಯವೇ ಅಲ್ಲ, ಅದರೊಳಗಿನ ಸಾಮರ್ಥ್ಯ ಬಹಳ ಮುಖ್ಯ" ಎಂದು ವಿವರಿಸಿದ.ಅಷ್ಟೇ ಅಲ್ಲ, ಅಪ್ಪ ತನ್ನ ಕಪ್ಪು ಮಗಳನ್ನು ಹತ್ತಿರ ಎಳೆದುಕೊಂಡು, "ನನಗೆ ನನ್ನ ಕಪ್ಪು ಬಲೂನೇ ಚಂದ" ಎಂದು ಪ್ರೀತಿ ಹೆಮ್ಮೆಯಿಂದ ಹೇಳಿದಾಗ, ನಿಮ್ಮಿಯ ದುಗುಡ ದೂರ ಸರಿದು ಹೋಯಿತು.

ನಮ್ಮ ಪುಟ್ಟ ನಿಮ್ಮಿ ಕಪ್ಪು ಹುಡುಗಿ. ಕೆಲವರು ಅವಳನ್ನು ನೀನು ಕರಿ, ನೋಡಲು ಚಂದ ಅಲ್ಲ, ಕಾಗೆ ಅಂತೆಲ್ಲ ಕರೆದು ನೋಯಿಸುತ್ತಿದ್ದರು. ಮೊದಮೊದಲಿಗೆ ನಿಮ್ಮಿಗೆ ಇದು ತುಂಬ ಬೇಸರ ತರುತ್ತಿತ್ತು. ಆದರೆ ಆಮೇಲೆ ಅವಳ ಪ್ರೀತಿಯ ತಂದೆ ಹೇಳಿಕೊಟ್ಟರು; 'ಕಪ್ಪು, ಬಿಳಿ ಏನೂ ಮುಖ್ಯವಲ್ಲ. ಚೆಲುವು ಇರುವುದು ಮನಸ್ಸಿನಲ್ಲಿ. ನೀನು ಇಂತಹ ವಿಷಯಗಳಿಗೆ ತಲೆ ಕೆಡಿಸಿಕೊಳ್ಳದೆ, ಖುಶಿಖುಶಿಯಾಗಿ ಇರು, ಅದಕ್ಕಿಂತ ಚಂದ ಯಾವುದೂ ಇಲ್ಲ. ಆ ಚಂದ ಮಾಸುವುದೂ ಇಲ್ಲ.'

ಅಪ್ಪ ಇಷ್ಟು ಹೇಳಿದಮೇಲೆ ನಿಮ್ಮಿ ಚಂದದ ಬಗ್ಗೆ ಯಾವತ್ತೂ ತಲೆ ಕೆಡಿಸಿಕೊಳ್ಳಲಿಲ್ಲ.

ನಾನಾ ಬಣ್ಣ, ಗಾತ್ರ, ಎತ್ತರ, ಗಮಲು, ಆಕಾರಗಳ ಜೀವ ಸಂಕುಲಕ್ಕೂ ಬದುಕುವ ಅವಕಾಶ ನೀಡಿ ಪೊರೆವ ಭೂಮಿ ಸುಂದರ. ಸೌಂದರ್ಯವೆಂದರೆ ಬಣ್ಣ, ಗಾತ್ರ, ಎತ್ತರವಲ್ಲ. ಆರೋಗ್ಯವಾಗಿರುವ, ದುಡಿದು ಉಣ್ಣುವ, ತಮಗೂ ಹಾನಿಯಾಗದೆ, ಬೇರೆಯವರಿಗೂ ಹಾನಿಯಾಗದಂತೆ ಬದುಕುವವರೆಲ್ಲರೂ ಸುಂದರರೇ.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

**ಚರ್ಮದ ಬಣ್ಣಕ್ಕೂ ಶಕ್ತಿ ಸಾಮರ್ಥ್ಯಕ್ಕೂ ಯಾವುದೇ ಸಂಬಂಧವಿಲ್ಲ. ಕಪ್ಪು ಎಂದು ಕೊರಗುವುದು, ಬಿಳಿ ಎಂದು ಹಿಗ್ಗುವುದು ಬೇಕಾಗಿಲ್ಲ**

*(ಆಧಾರ: ಚಂದದ ಬದುಕು, ಕಿಶೋರಿಯರಿಗೆ ಜೀವನ ಕೌಶಲ್ಯ ಮಾಹಿತಿ ಕೈಪಿಡಿ, ಯುನಿಸೆಫ್ ಕೊಪ್ಪಳ ಪ್ರಕಟಣೆ)*

## ಬೆವರು–ಬದುಕು

ಭಾರತದ ಮಹಿಳೆಯರ ಕ್ರಿಕೆಟ್ ಟೀಮ್ ಬಗೆಗೆ ನಿಮಗೆ ಗೊತ್ತಿರಬಹುದು. ಮಿಥಾಲಿ ರಾಜ್ ಎಂಬಾಕೆ ಅದರ ನಾಯಕಿ. ದಿಟ್ಟೆ, ನೇರ ಮಾತಿನ ಹುರಿಯಾಳು. ಅವಳ ಸಮರ್ಥ ನಾಯಕತ್ವದಲ್ಲಿ ಭಾರತದ ಮಹಿಳಾ ಕ್ರಿಕೆಟ್ ತಂಡ ಹಲವು ಟ್ರೋಫಿಗಳನ್ನು ಬಗಲಿಗೇರಿಸಿಕೊಂಡಿದೆ. ಆಕೆಯೂ 34 ವರ್ಷವಾಗುವುದರಲ್ಲಿ ಪದ್ಮಶ್ರೀ, ಅರ್ಜುನ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದ್ದಾಳೆ.

ಇತ್ತೀಚೆಗೆ ಟ್ವಿಟರಿನಲ್ಲಿ ಆಕೆಗೆ ಒಂದು ಅನುಭವವಾಯಿತು.

ತನ್ನ ಗೆಳತಿಯರೊಂದಿಗೆ ಮಿಥಾಲಿ ಒಂದು ಸೆಲ್ಫೀ ತೆಗೆದುಕೊಂಡಳು. ಅದನ್ನು ಟ್ವಿಟರಿನಲ್ಲಿ ಹಾಕಿದ್ದಳು. ಆ ಫೋಟೋದಲ್ಲಿ ಅವಳ ಕಂಕುಳ ಭಾಗ ಬೆವೆತದ್ದು ಕಾಣುವಂತಿತ್ತು. ಅವಳ ಅಭಿಮಾನಿಯೊಬ್ಬ 'ಕಂಕುಳು ಬೆವೆತದ್ದು ಫೋಟೋದಲ್ಲಿ ಕಾಣಿಸುತ್ತಿದೆ. ಫ್ಯಾಷನ್ನಿನ ಗಂಧಗಾಳಿಯೂ ಗೊತ್ತಿಲ್ಲ ನಿನಗೆ, ನಾಚಿಕೆಯಾಗುವುದಿಲ್ಲವೇ?' ಎಂದು ಕೇಳಿದ.

ಸಾರ್ವಜನಿಕವಾಗಿ ಹೀಗೆ ಕೇಳಿ ತನ್ನನ್ನು ಅವಮಾನಿಸಬೇಕೆಂದುಕೊಂಡಿರುವವರಿಗೆ ಆಕೆ ಬಹಿರಂಗವಾಗಿಯೇ ಉತ್ತರಿಸಿದಳು. 'ನನ್ನ ಬೆವರಿನ ಬಗ್ಗೆ ನನಗೆ ನಾಚಿಕೆಯೇ? ಊಂಹ್ಞೂಂ, ಅಷ್ಟು ಬೆವರು ಹರಿಸಿದ್ದರಿಂದಲೇ ಇವತ್ತು ನಾನಿಲ್ಲಿ ಇದ್ದೇನೆ. ಬೆವರು ಹರಿಸಿದ್ದರಿಂದಲೇ ರಾಜಾಸ್ಥಾನದ ಒಬ್ಬ ಹುಡುಗಿಯಾಗಿದ್ದವಳು ಇವತ್ತಿನ ನಾನಾಗಿದ್ದೇನೆ. ಕ್ಷಮಿಸಿ, ನನ್ನ ಬೆವರಿನ ಬಗೆಗೆ ನನಗೆ ನಾಚಿಕೆಯಲ್ಲ, ಬದಲಾಗಿ ಹೆಮ್ಮೆಯಿದೆ!' ಎಂದು ತಿರುಗೇಟು ನೀಡಿದಳು.

ಎಷ್ಟು ನಿಜ ಅಲ್ಲವೆ? ಕಷ್ಟಪಟ್ಟು ದುಡಿದು, ಶ್ರಮಗೊಂಡು ದಣಿದು ಬೆವರು ಹರಿಸುವುದು ಯಾವುದೇ ಮನುಷ್ಯ ಜೀವಿಗೆ ನಾಚಿಕೆ ತರುವುದು ಹೇಗೆ? ಬದಲಾಗಿ ಅದು ಹೆಮ್ಮೆ ಪಡುವ ವಿಷಯ. ದುರ್ಗಂಧ ಸೂಸುವ ಬೆವರನ್ನು ತೊಳೆದುಕೊಳದೇ, ಮೀಯದೇ ಕೊಳಕರಾಗಿರುವುದು ಸರಿಯಲ್ಲ. ಆದರೆ ದುಡಿಯುವಾಗ, ಶ್ರಮಪಡುವಾಗ ಹೊರಕಾಣಿಸುವ ಬೆವರು ಅವಮಾನಸೂಚಕವಾಗುವುದು ಹೇಗೆ?

ರೈತ ಬೆವರು ಹರಿಸಿ ಅಕ್ಕಿ, ರಾಗಿ, ಜೋಳ ಬೆಳೆಯದಿದ್ದರೆ ನಮ್ಮ ಹೊಟ್ಟೆ ತುಂಬಲು ಸಾಧ್ಯವೇ? ಕೂಲಿ ಕೆಲಸಗಾರರು ಬೆವರು ಹರಿಸಿ ರಸ್ತೆ, ಸೇತುವೆ, ನಿಲ್ದಾಣಗಳ ಕಟ್ಟದಿದ್ದರೆ ನಮ್ಮ ಬಸ್ಸು, ಕಾರು, ಮೋಟರು, ವಿಮಾನ ವೇಗವಾಗಿ ಚಲಿಸುವುದೆ? ಗಣಿ ಕೆಲಸಗಾರರು ಬೆವರೆನದೆ, ಧೂಳೆನದೆ ಕೆಲಸ ಮಾಡದಿದ್ದರೆ ಇಷ್ಟೆಲ್ಲ ವಸ್ತುಗಳು ಹೇಗೆ ಆಗುತ್ತಿತ್ತು ಅಲ್ಲವೇ? ಬೆವರು ಸುರಿಸಿ, ನೋವು ತಿಂದು ಅಮ್ಮ ಹೆರದಿದ್ದರೆ ನಾವು ಈ ಭೂಮಿ ಮೇಲೆಯೇ ಇರುತ್ತಿರಲಿಲ್ಲ ಅಲ್ಲವೆ?

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕೆಲವು ಸಸ್ತನಿಗಳಷ್ಟೇ ಬೆವರುವುದು. ಬೆವರು ಬರುವುದು ಒಂದು ಅತ್ಯಂತ ಸಹಜ ಪ್ರಕ್ರಿಯೆ. ಬೆವರು ಹರಿಸುವುದು ಕಾಯಿಲೆಯೂ ಅಲ್ಲ, ಅವಮಾನವೂ ಅಲ್ಲ. ಮನುಷ್ಯ ಪ್ರಾಣಿಯು ತನ್ನ ದೇಹದ ಉಷ್ಣತೆಯನ್ನು ಸದಾ ಒಂದೇರೀತಿ ಇಟ್ಟುಕೊಳ್ಳಲೆಂದು ಚರ್ಮದಲ್ಲಿ ಬೆವರ ಗ್ರಂಥಿಗಳನ್ನು ಹೊಂದಿರುವುದು. ಹೊರಸೂಸಿದ ಬೆವರನ್ನು ಆವಿಯಾಗಿಸುವುದರ ಮೂಲಕ ದೇಹ ತನ್ನ ಉಷ್ಣತೆಯನ್ನು ಕಾಪಾಡಿಕೊಳ್ಳುತ್ತದೆ. ಬೆವರಿನ ಪ್ರಮಾಣ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ಸೆಕೆಯಿರುವಾಗ, ಶ್ರಮದ ಕೆಲಸ ಮಾಡಿದಾಗ ದೇಹ ಬಿಸಿಯಾಗುವುದನ್ನು ತಪ್ಪಿಸಲು ಹೆಚ್ಚು ಬೆವರುತ್ತೇವೆ. ಜ್ವರ ಬಿಡುವಾಗ, ಓಡಿದ ಮೇಲೆ ಬೆವರುವುದನ್ನು ನೆನಪಿಸಿಕೊಳ್ಳಿ.

ದುರದೃಷ್ಟವಶಾತ್ ಕುಳಿತು ಉಣ್ಣುವುದು, 'ಆರಾಮಾಗಿ' ಇರುವುದು, ಪರರಿಂದ ಸೇವೆ ಮಾಡಿಸಿಕೊಂಡು ಸೋಮಾರಿಯಾಗಿ ಇರುವುದು ನಮ್ಮಲ್ಲಿ ಮೌಲ್ಯ ಎನಿಸಿಕೊಳ್ಳತೊಡಗಿದೆ. ಖಂಡಿತ ಅಲ್ಲ. 'ಬೆವರು ಹರಿಸದೆ ಹಿಟ್ಟುಣಬೇಡ' ಎಂಬ ಮಾತಿದೆ.ಬೆವರು ಹರಿಸುವುದು ಎಂದರೆ ಒಂದಷ್ಟಾದರೂ ಶ್ರಮ ಪಡುವುದು. ಕುಳಿತು ಉಣ್ಣುವುದು ಅತ್ಯಂತ ಕೆಟ್ಟ ಮೌಲ್ಯ. ಮನುಷ್ಯರು ಸಿರಿವಂತರಿರಲಿ, ಬಡವರಿರಲಿ ದುಡಿದೇ ಉಣ್ಣಬೇಕು. ಯಾವ ಉದ್ಯೋಗ ಮಾಡುವವರೇ ಆಗಿರಲಿ, ದುಡಿದು ಉಣ್ಣಬೇಕು. ತಮ್ಮ ಕೆಲಸ ತಾವು ಮಾಡಿಕೊಳ್ಳುವತ್ತ ಗಮನ ಹರಿಸಬೇಕು. ಆಗ ಕೊಲಸ್ಟೆರಾಲ್ ಏರಿಕೆ, ಹೃದಯ ಕಾಯಿಲೆ, ಸಿಹಿಮೂತ್ರ ರೋಗ ಮುಂತಾದವು ದೂರ ಉಳಿಯುತ್ತವೆ. ಬೆವರು ಹರಿಸಿದೆವೆಂದರೆ ನಮ್ಮ ಕೈಕಾಲ ಮಾಂಸಮಜ್ಜೆಗಳು ಚಲನಶೀಲ ಸ್ಥಿತಿಯಲ್ಲಿರುತ್ತವೆ.

ಅದಕ್ಕೇ ಬಂಧು, ನಮ್ಮನ್ನು ನಿರೋಗಿಯಾಗಿಸುವ, ಸ್ವಾವಲಂಬಿಯಾಗಿಸುವ, ಮನಸ್ಸಿಗೆ ನೆಮ್ಮದಿ ನೀಡುವ ಶ್ರಮ ಎಷ್ಟು ಒಳ್ಳೆಯ ಮೌಲ್ಯ ಅಲ್ಲವೆ?

## ಯಾವುದು ನಿಜವಾದ ಮೆರಿಟ್?

ಕ್ರಿಕೆಟಿಗ ಎಂ. ಎಸ್. ಧೋನಿಯವರ ಜೀವನಾಧಾರಿತ ಸಿನಿಮಾವೊಂದು ಬಂತು. ನೋಡಿದಿರಾ? ಎಳೆಯ ಹುಡುಗನಿಗೆ ಆಟವೆಂದರೆ ಬಲುಬಲು ಇಷ್ಟ. ಅದರಲ್ಲಿ ಎಷ್ಟು ಮುಳುಗಿಹೋಗಿದ್ದನೆಂದರೆ ಪರೀಕ್ಷೆಯಲ್ಲಿ ಅಂಕಗಳಿಕೆ ಸಾಧ್ಯವಾಗುತ್ತಿರಲಿಲ್ಲ. ಅದಕ್ಕೆ ಕೆಳಮಧ್ಯಮ ವರ್ಗದ ತಾಯ್ತಂದೆಯರಿಂದ ನಿತ್ಯ ಒತ್ತಡ, ಬೈಗುಳ. ಆದರೆ ಮಹೇಂದ್ರ ಆಟ ನಿಲ್ಲಿಸಲಿಲ್ಲ. ಕೂತರೆ, ಎದ್ದರೆ, ನಿದ್ದೆಗಣ್ಣಿನಲ್ಲೂ ಕ್ರಿಕೆಟನ್ನೇ ಧ್ಯಾನಿಸಿ ಅತ್ಯುತ್ತಮ ಆಟಗಾರನಾಗಿ ರೂಪುಗೊಂಡ. ಅತಿ ಕಿರಿಯ ವಯಸ್ಸಿಗೆ ಭಾರತ ತಂಡದ ನಾಯಕನಾಗಿ ವಿಶ್ವಕಪ್ ಗೆದ್ದ.

ಶಾಲೆಯಲ್ಲಿ ಮೆರಿಟ್ ಸ್ಟೂಡೆಂಟ್ ಅಲ್ಲದ ಹುಡುಗನೂ ಎಂಥ ಸಾಧನೆ ಮಾಡಿದ ಅಲ್ಲವೆ? ಎಮ್.ಎಸ್. ಎಂದೇ ಖ್ಯಾತರಾಗಿದ್ದ ಸುಬ್ಬುಲಕ್ಷ್ಮಿಯವರು ಕರ್ನಾಟಕ ಸಂಗೀತದ ಅನರ್ಘ್ಯ ರತ್ನ. ಭಾರತ ರತ್ನ ಎಂ.ಎಸ್.ಸುಬ್ಬುಲಕ್ಷ್ಮಿಯವರು ಓದಿದ್ದು ಐದನೇ ತರಗತಿಯವರೆಗೆ ಮಾತ್ರ. ನೃತ್ಯ ಲೋಕದ ಅನನ್ಯ ತಾರೆ ಬಾಲ ಸರಸ್ವತಿಯವರು ಹೆಚ್ಚು ಓದಿರಲಿಲ್ಲ. ಶಾಲಾ ಶಿಕ್ಷಣದಲ್ಲಿ ಹಿಂದಿದ್ದು ಇತರ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆ ಮಾಡಿರುವ ಹಲವು ವ್ಯಕ್ತಿಗಳಿದ್ದಾರೆ. ಮಧುರವಾಗಿ ಹಾಡುವುದು, ಮನಸೆಳೆವ ಅಭಿನಯ–ನೃತ್ಯ ಮಾಡುವುದು, ಆಟ ಆಡುವುದು,

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ರುಚಿಕಟ್ಟಾಗಿ ಅಡುಗೆ ಮಾಡುವುದು, ತಮಟೆ–ಡೋಲು ಬಾರಿಸುವುದು, ಚಕಚಕನೇ ಮರ ಹತ್ತುವುದು, ಮೀನು ಹಿಡಿಯುವುದು, ಕೃಷಿ ಮಾಡುವುದು – ಈ ಎಲ್ಲವೂ ಸಾಮಾನ್ಯ ಕೆಲಸಗಳಲ್ಲ. ಅವೂ ವ್ಯಕ್ತಿಯ 'ಮೆರಿಟ್' ಆಗಿವೆ.

ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ತೆಗೆಯುವುದಷ್ಟೇ ಮೆರಿಟ್‌ನ ಮಾನದಂಡವಲ್ಲ. ನಮ್ಮ ಶಕ್ತಿ ಸಾಮರ್ಥ್ಯವನ್ನು ಪರೀಕ್ಷೆಯ ಅಂಕಗಳಷ್ಟೇ ಅಳೆಯಲಾರವು. ಅಂಕಗಳಿಗೆ ಅಂಜಿ ಅಮೂಲ್ಯವಾದ ಬದುಕನ್ನು ಕಳೆದುಕೊಳ್ಳಬಾರದು. ಕೀಳರಿಮೆಗೆ ಒಳಗಾಗಬಾರದು. ನಮ್ಮೊಳಗೆ ಒಂದಕ್ಕಿಂತ ಹೆಚ್ಚು ಕೌಶಲ್ಯಗಳಿರುತ್ತವೆ. ಒಂದರಲ್ಲಿ ಸಫಲತೆ ಸಿಗದಿದ್ದಲ್ಲಿ ಉಳಿದವುಗಳ ಕಡೆಗೂ ಗಮನ ನೀಡಬೇಕು. ಅವುಗಳ ಬೆಳೆಸಿಕೊಳ್ಳಬೇಕು.ಆಗ ಒಂದಲ್ಲ ಒಂದು ಕೌಶಲ ನಮ್ಮ ಬದುಕನ್ನು ಕಟ್ಟಿಕೊಳ್ಳಲು ಸಹಾಯಕವಾಗುತ್ತದೆ. ಸಮಾಜದಲ್ಲಿ ಯಾರೂ ಹುಟ್ಟುತ್ತಲೇ ದಡ್ಡರಾಗಿ ಅಥವಾ ಬುದ್ಧಿವಂತರಾಗಿ ಹುಟ್ಟುವುದಿಲ್ಲ. ಎಲ್ಲರಲ್ಲಿಯೂ ಒಂದಲ್ಲ ಒಂದು ಕೌಶಲ್ಯಗಳಿರುತ್ತವೆ. ಅವು ಸಹಜವಾಗಿ ವಿಕಾಸವಾಗುವುದಕ್ಕೆ ಅವಕಾಶ ಸಿಕ್ಕಿರುವುದಿಲ್ಲ. ನಾವು ಬದುಕುವ ಪರಿಸರ, ನಮಗೆ ಸಿಗುವ ಅವಕಾಶಗಳು, ಮಾರ್ಗದರ್ಶನಗಳು ನಮ್ಮ ಪರಿಸ್ಥಿತಿಗೆ ಕಾರಣವಾಗಿರುತ್ತವೆ. ಹಾಗಾಗಿ ತರಗತಿಯಲ್ಲಿ ನಮ್ಮನ್ನೂ ಸೇರಿದಂತೆ ಪ್ರತಿಯೊಬ್ಬರೂ ಸಮಾನರು ಎಂಬ ಭಾವದಿಂದ ನೋಡುವುದನ್ನು ರೂಢಿಸಿಕೊಳ್ಳಬೇಕು.

ಕೊನೆಯದಾಗಿ ನಾವು ಚೆನ್ನಾಗಿ ಓದಬೇಕು. ಜೊತೆಗೆ ಕ್ರೀಡೆ, ಸಂಗೀತ ಮತ್ತಿತರ ಕೌಶಲಗಳನ್ನು ಪರೀಕ್ಷೆಗೆ ಒಡ್ಡಿಕೊಳ್ಳಬೇಕು. ಇವು ನಮ್ಮ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುತ್ತವೆ. ನಮ್ಮ ನಿರೀಕ್ಷೆಯ ಅಂಕಗಳು ಸಿಕ್ಕಾಗ ಹಿರಿಹಿರಿ ಹಿಗ್ಗದೇ, ಸಿಗದಿದ್ದಾಗ ಕುಗ್ಗದೇ ಸಮಚಿತ್ತದಿಂದ ಇರಲು ಸಹಾಯ ಮಾಡುತ್ತವೆ. ನಿರಂತರ ಪ್ರಯತ್ನದಿಂದ ನಾವು ಏನೂ ಬೇಕಾದರೂ ಸಾಧಿಸಬಹುದು. ಹಾಗಾಗಿ ಮೆರಿಟ್ ಸಿಕ್ಕಿಲ್ಲವೆಂದು ಖಿನ್ನತೆಗೆ ಒಳಗಾಗುವುದಕ್ಕಿಂತ ನಮ್ಮಲ್ಲಿರುವ ಇತರ ಅಂಶಗಳ ಬಗ್ಗೆ ಶೋಧಿಸಿ ಅವುಗಳನ್ನು ಬಳಸಿಕೊಂಡು ಜೀವನ ಕಟ್ಟಿಕೊಳ್ಳಲು ಪ್ರಯತ್ನಿಸಬೇಕು. ಸಾಧ್ಯವಾದಷ್ಟು ಇತರರಿಗೆ ಸಹಾಯ ಮಾಡುತ್ತಾ ಖುಷಿಯಿಂದ ಬದುಕುವುದನ್ನು, ಎಲ್ಲರ ಯಶಸ್ಸು–ಖುಷಿಯಲ್ಲಿ ನನ್ನದನ್ನು ಕಾಣಲು ರೂಢಿಸಿಕೊಳ್ಳಬೇಕು.

## ಮುಟ್ಟು ಮುಟ್ಟೆಂದೇಕೆ...

**ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ**
**ಮುಟ್ಟಿನಿಂದಲ್ಲವೆ ನಮ್ಮೆಲ್ಲರ ಹುಟ್ಟು**
**ಮುಟ್ಟು ಮುಟ್ಟೆಂದೇಕೆ ಕೀಳರಿಮೆ ಹೊಂದುವಿರಿ**
**ಮುಟ್ಟಲ್ಲವೇ ನಮ್ಮ ಸೃಷ್ಟಿಯ ಗುಟ್ಟು...**

ಹೆಣ್ಣು, ಹೆಣ್ತನ ಎನ್ನುವುದು ರೂಪ ವಿಶೇಷವಷ್ಟೇ ಅಲ್ಲ, ಅದೊಂದು ಭಾವನಾತ್ಮಕ, ದೈಹಿಕ ವಿಶೇಷ. ಮುಟ್ಟಾಗುವವರು, ಆಗದಿರುವವರು, ಮದುವೆಯಾದವರು, ಆಗದವರು, ಮಕ್ಕಳ ಹೆತ್ತವರು, ಹೆರದವರು, ಭಾವನಾತ್ಮಕವಾಗಿ ತಾನು ಹೆಣ್ಣೆಂದುಕೊಂಡವರು ಎಲ್ಲ ತರಹದ ಹೆಣ್ಮಕ್ಕಳಿದ್ದಾರೆ. ಒಂದು ಹೆಣ್ಣುಮಗುವನ್ನು ಅವಳ ಮನಸು ಎಷ್ಟೋ ಅಷ್ಟೇ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ದೇಹವೂ, ಸಮಾಜವೂ ರೂಪಿಸುತ್ತವೆ. ಆದರೆ ಮನುಷ್ಯ ಸಮಾಜದಲ್ಲಿ ಹೆಣ್ಣು ಎನ್ನುವುದೇ ಆ ಕುಲದ ಹಲವಾರು ಸಮಸ್ಯೆಗಳಿಗೆ ಕಾರಣವಾಗಿದೆ.

ಹೆಣ್ಣಿನ ದೇಹ ರಚನೆ, ಅದರ ಕೆಲಸಕಾರ್ಯಗಳು ತುಂಬ ವಿಶೇಷವಾದಂಥವು. ಅವಳ ಬಹುಪಾಲು ಅಂಗಾಂಗಗಳು, ದೇಹದ ಕೆಲಸಕಾರ್ಯಗಳು ವಿಶಿಷ್ಟವಾಗಿ ರೂಪುಗೊಂಡಿರುವಂಥವು.ಅವಳ ದೇಹದಲ್ಲಿ ನಡೆಯುವ ಹಲವಾರು ವಿಶಿಷ್ಟ ಪ್ರಕ್ರಿಯೆಗಳಲ್ಲಿ ಮುಟ್ಟು ಕೂಡಾ ಒಂದು.ಪುಟ್ಟ ಹುಡುಗಿ ದೊಡ್ಡವಳಾಗುವಾಗ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗಳು ಸಂಭವಿಸುತ್ತವೆ. ಅದನ್ನೇ ಋತುಚಕ್ರ ಅಥವಾ ಮುಟ್ಟು ಎನ್ನುತ್ತೇವೆ.

ಹೆಣ್ಣಿನ ದೇಹದಲ್ಲಿ ಪ್ರತಿ ತಿಂಗಳು ನಿಯಮಿತವಾಗಿ ಒಂದು ಅಂಡ ಬಿಡುಗಡೆ ಹೊಂದುತ್ತದೆ. ನಂತರ ಗರ್ಭ ಕಟ್ಟಲು ಗರ್ಭಕೋಶವು ತಯಾರಿ ನಡೆಸುತ್ತದೆ. ಹಾಗಾಗದಿದ್ದಲ್ಲಿ ತಿಂಗಳ ಕೊನೆಗೆ ಗರ್ಭಕೋಶದ ಒಳಪದರವು ರಕ್ತಸ್ರಾವದಲ್ಲಿ ಕಳಚಿಕೊಳ್ಳುತ್ತದೆ. ಇವಿಷ್ಟು ಒಂದು ಋತುಚಕ್ರದ ಅವಧಿಯಲ್ಲಿ ನಡೆಯುವ ಕ್ರಿಯೆಗಳು.ಋತುಚಕ್ರ ಶುರುವಾಗುವ ಸರಾಸರಿ ವಯಸ್ಸು 10ರಿಂದ 18 ವರ್ಷಗಳು.ಮನುಷ್ಯ ಸಂತತಿ ಉಳಿಯಲು, ಹೆಣ್ಣು ದೇಹದ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯಲು ಮುಟ್ಟು ಅನಿವಾರ್ಯ.ಜೊತೆಗೇ ಇದೊಂದು ಅತ್ಯಂತ ನೈಸರ್ಗಿಕ ಕ್ರಿಯೆಯೂ ಹೌದು.

ಆದರೆ ಇಷ್ಟು ಸಹಜ ಪ್ರಕ್ರಿಯೆಯಾದ ಮುಟ್ಟಿನ ಹೆಸರು ಹೇಳಿ ಹೆಣ್ಣುಮಕ್ಕಳನ್ನು ಎಂದಿನಿಂದಲೂ ವಂಚಿಸಲಾಗುತ್ತಿದೆ. ಮುಟ್ಟಿನ ಬಗ್ಗೆ ಇಲ್ಲಸಲ್ಲದ ತಪ್ಪು ಕಲ್ಪನೆಗಳು ಅನೇಕ ಮೌಢ್ಯಾಚರಣೆಗಳಿಗೆ ಕಾರಣವಾಗಿವೆ. ಆ ಮೂರು ದಿನ ಹೆಣ್ಮಕ್ಕಳನ್ನು ಮನೆಯ ಹೊರಗೆ ಕೂರಿಸಿ, ದೇವರು–ಊಟದ ಮನೆಗೆ ಬರದ ಹಾಗೆ, ಅಷ್ಟೇ ಅಲ್ಲ ಕೆಲವು ಗ್ರಾಮಗಳಲ್ಲಿ ಊರಿಗೇ ಬರದ ಹಾಗೆ ಹೊರಗಿಡುವ ಪರಿಪಾಠವಿದೆ. ಪವಿತ್ರ ಕಾರ್ಯ, ಹಬ್ಬಹರಿದಿನಗಳು ನಡೆಯುವ ವೇಳೆ ಮುಟ್ಟು ಬರುವ ದಿನವನ್ನು ಹಿಂದೆ–ಮುಂದೆ ಮಾಡುವ ಮಾತ್ರೆ ತೆಗೆದುಕೊಳ್ಳುವಂತೆ ಒತ್ತಡ ಹೇರಲಾಗುತ್ತದೆ. ಅವೆಲ್ಲ ಹೆಣ್ಮಕ್ಕಳ ಆರೋಗ್ಯಕ್ಕೆ ಅಪಾಯಕರವಾಗಿವೆ. ಈ ಆಧುನಿಕ ಕಾಲದಲ್ಲಿ, ಮಹಿಳೆ ಬಾಹ್ಯಾಕಾಶ ಯಾನ ಮಾಡಿಬಂದ ಮೇಲೂ, ಸಮಾನ ಅವಕಾಶ–ಹಕ್ಕುಗಳನ್ನು ಕಾನೂನಾತ್ಮಕವಾಗಿ ಪಡೆದಿದ್ದಾಗಲೂ ಧರ್ಮ–ದೇವರ ಕಾರಣ ಹೇಳಿ ಮುಟ್ಟಿನ ಹೆಸರಿನಲ್ಲಿ ಅವಳನ್ನು ಹೊರಗಿಡುವುದು ಅನ್ಯಾಯವೂ ಆಗಿದೆ.

**ಯೋಚಿಸಿ:**

- ಮುಟ್ಟಾದಾಗ ಅಶುದ್ಧ ಎನ್ನುವುದೇ ಹೆಣ್ಣಿನ ಕುರಿತ ಎಲ್ಲ ಕೀಳು ಭಾವನೆ, ತಾರತಮ್ಯಕ್ಕೆ ಮೂಲ ಕಾರಣವಾಗಿದೆ. ಮುಟ್ಟು ಎನ್ನುವುದು ಪ್ರಕೃತಿ ಸೃಷ್ಟಿಸಿರುವ ದೇಹದ ಪವಿತ್ರ ಕ್ರಿಯೆ. ಹಾಗಿರುವಾಗ ಋತುಮತಿಯಾದ ದಿನಗಳಲ್ಲಿ ಹೆಣ್ಣು ಪೂಜಾರ್ಹಳಲ್ಲವೆ?

- ಮುಟ್ಟಾದವರನ್ನು ಮುಟ್ಟಿದರೆ, ಅಂಥವರು ಮಗುವನ್ನು ಮುಟ್ಟಿದರೆ ರೋಗ ಬರುವುದೆನ್ನುವುದು ಸಂಪೂರ್ಣ ಸುಳ್ಳು. ಆಸ್ಪತ್ರೆ, ಬ್ಯಾಂಕು, ಕಾರ್ಖಾನೆ, ಶಾಲೆ ಕಾಲೇಜು, ಹೋಟೆಲು, ಕಚೇರಿಗಳಲ್ಲಿ ಹೆಣ್ಣುಮಕ್ಕಳಿಗೆ ತಿಂಗಳಲ್ಲಿ ಮೂರು ದಿನ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ರಜೆ ಕೊಡುವರೆ? ಅನ್ನ–ಜ್ಞಾನ–ಅಧಿಕಾರ ಕೊಡುವ ಸ್ಥಳಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ ಅಪವಿತ್ರವೆನಿಸದ ಮುಟ್ಟು ಮನೆ–ದೇವಾಲಯಗಳಲ್ಲಿ ಮಾತ್ರ ಅಪವಿತ್ರವೆನಿಸುವುದು ಹೇಗೆ?

- ಮುಟ್ಟಾದಾಗ ಮುಟ್ಟಬಾರದು ಎಂಬ ಕಲ್ಪನೆ ಹೆಣ್ಣಿಗೆ ವಿರಾಮ ನೀಡಲೆಂದು ಹುಟ್ಟಿದ್ದಲ್ಲ. ಅಷ್ಟಕ್ಕೂ ಅವಳು ಆರಾಮ ತೆಗೆದುಕೊಳ್ಳುವುದಾದರೆ ಹೊರಗೇಕೆ ಕೂರಬೇಕು? ತನ್ನ ಮನೆಯೊಳಗೇ ಆರಾಮ ತೆಗೆದುಕೊಳ್ಳಬಹುದಲ್ಲವೆ? ಕೆಲವೊಂದು ಸಮುದಾಯದಲ್ಲಿ ಮುಟ್ಟಾದ ಹೆಣ್ಣನ್ನು ಊರಿಂದಲೇ ಹೊರಗೆ ಇರಿಸುತ್ತಾರೆ! ಮನೆಯ ಹೊರಗೆ, ಹೊರಜಗುಲಿಯಲ್ಲಿ, ಊರ ಹೊರಗೆ ವಿರಾಮ ಕೊಡುವುದು ಏಕೆ?

ಇದೆಲ್ಲದರಿಂದ ತಿಳಿಯುವುದೇನೆಂದರೆ ಮುಟ್ಟಿನ ದಿನಗಳಲ್ಲಿ ಆಚರಿಸಿಕೊಂಡು ಬಂದಿರುವ ಹೊರಗಿಡುವಿಕೆಯು ಹೆಣ್ಣಿಗೆ ತೋರಿಸುವ ತಾರತಮ್ಯವೇ ಹೊರತು ಮತ್ತೇನಲ್ಲ. ಮುಟ್ಟು ಎಂಬ ಪ್ರಕೃತಿ ಸಹಜ ಕ್ರಿಯೆಯು ಮಹಿಳಾ ಹಕ್ಕುಗಳನ್ನು ಮೊಟಕುಗೊಳಿಸಲು ಬಿಡದಿರೋಣ. ದೇಹ–ಆರೋಗ್ಯಗಳ ಕುರಿತ ವೈಜ್ಞಾನಿಕ ಅರಿವನ್ನು ಬಿತ್ತೋಣ.

*ಮುಟ್ಟು ಮುಟ್ಟೆಂದೇಕೆ ಕೀಳಾಗಿ ಕಾಣುವಿರಿ/ಮುಟ್ಟಿನಿಂದಲ್ಲವೆ ನಮ್ಮೆಲ್ಲರ ಹುಟ್ಟು?*
*ಮುಟ್ಟು ಮುಟ್ಟೆಂದೇಕೆ ಕೀಳರಿಮೆ ಹೊಂದುವಿರಿ/ಮುಟ್ಟಲ್ಲವೆ ನಮ್ಮ ಸೃಷ್ಟಿಯ ಗುಟ್ಟು?*

*ಮುಟ್ಟು ಕಾಣದ ಹೆಣ್ಣು ಬಸಿರು ಹೊಂದುವುದಿಲ್ಲ/ಮಗುವನ್ನು ಹೆರಲು ಸಾಧ್ಯವೇನು?*
*ನಮ್ಮನ್ನು ಹೆತ್ತವಳು ಮುಟ್ಟಾಗದಿರುತಿದ್ರೆ/ಭೂಮಿಯಲಿ ನಾವು ಇರುತಿದ್ದೇವೇನು?*

*ಮುಟ್ಟು ಸ್ರಾವಗಳೆಲ್ಲ ಪ್ರಕೃತಿಯ ಸಹಜ ಕ್ರಿಯೆ/ಬೆವರು ಬಾಧೆಗಳಂತೆ ಅಲ್ಲವೇನು?*
*ಮುಟ್ಟಾದ ಹೆಣ್ಣನ್ನು ದೂರ ಅಟ್ಟುವುದೇಕೆ/ಅವಳು ಮಾಡಿದ ಘೋರ ಪಾಪವೇನು?*

*ಜಗದ ಜೀವಿಗಳೆಲ್ಲ ದೈವಸೃಷ್ಟಿಯಾದಂತೆ/ಮುಟ್ಟು ಕೂಡ ಪವಿತ್ರ ಹೌದು ತಾನೆ?*
*ದೇವರದೆ ಸೃಷ್ಟಿಯು ಶುಭದಾ ಕಾರ್ಯಗಳಲ್ಲಿ/ವರ್ಜ್ಯ ಅನ್ನುವುದೆಲ್ಲ ತಪ್ಪು ತಾನೆ?*

*ಮುಟ್ಟಿನ ಕುರಿತಾಗಿ ಸತ್ಯ ಸಂಗತಿ ಅರಿತು/ಹೊಸ ದೃಷ್ಟಿಯನು ನಾವು ಹೊಂದಬೇಕು*
*ಕುರುಡು ನಂಬಿಕೆಗಳನು ಇಲ್ಲವಾಗಿಸಿ ನಾವು/ಮಾನವೀಯತೆಯಿಂದ ಬದುಕಬೇಕು*

(ಶ್ರೀನಿವಾಸ ಕಾರ್ಕಳ ಅವರ ಕವಿತೆ)

## ಕುಲಕುಲ ಕುಲವೆಂದು..

### ದೃಶ್ಯ–1

**ಲಕ್ಷ್ಮಿ–** (ಈಕೆ ಶಾಲೆಯೊಂದರಲ್ಲಿ ಅಡುಗೆ ಸಹಾಯಕಿಯಾಗಿ ಕೆಲಸ ಮಾಡುವವಳು) ಯಾಕ?ನಾವ್ ಅಡ್ಗೆ ಮಾಡಿದ್ರೆ ಸಾಲೀ ಬಿಡ್ತಾರಂತ ಮಕ್ಳು? ಅದ್ನೆಲ್ಲ ಅವ್ರ ತಲೇಲಿ ಯಾರು ಹಾಕ್ಯಾರ ಅಂತೀನಿ? ಇಷ್ಟ್ ದಿನಾ ಉಂಡ್ರಲ್ಲ, ಏನಾರೂ ಆತೇನು ಅವ್ರಿಗೆ? ನಾ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಅಡ್ಗೆ ಮಾಡಿ ಹಾಕಿದ್ರೆ ಬರಬಾರ್ದ ರೋಗ ಬರ್ತೈತಾ ಇವ್ರಿಗೇ? ಅಡಿಗೀ ಕೆಲ್ಸಾ ಬಿಡ್ರಿ ಪಲ್ಲೇ ಹಸನ್ ಮಾಡೋದು, ಬಾಂಡೆ ಬೆಳಗೋ ಕೆಲ್ಸಕ್ಕೆ ಹಾಕ್ಯಾರ್ರಲ್ಲಾ, ಹೊಲ್ದಾಗಿನ ಬೆಳೀಗೆ ನೀರು ಹಾಸೋರು ಯಾರಂತ?ನೀರು ಹಾಕಿದ್ರೆ ನಡೀತೈತಿ, ಕಾಯ್ಪಲ್ಲೇ ಕೋದಿಟ್ರೆ ನಡೀತೈತಿ, ಅದಕ್ಕಷ್ಟು ಉಪ್ಪಾ, ಖಾರಾ ಹಾಕಿ ಕುದಸಿದ್ರೆ ಇವ್ರ ಜಾತಿ ಕೆಟ್ಟು ಹೋಕೈತೀ? ಯಾಕ? ನಮ್ಮ ಮೈಯಾಗೇನು ಕರೀ ರಕ್ತಾ ಹರೀಕತ್ತೈತೀ?

(ಗೊಣಗುತ್ತ ಕುಡಿಯಲು ನೀರಿಗೆ ಹುಡುಕ್ತಾಳೆ. ಬಿಂದಿಗೆ ಖಾಲಿ ಆಗಿದೆ.)

**ಲಕ್ಷ್ಮಿ:** ಥೇ! ಇದಕ್ಕ ಬ್ಯಾನಿ ಬರ್ಲಿ. ಕುಡಿಯಾಕೆ ನೀರ್ ಸುದಾ ಇಲ್ಲ. ಬೋರಿಗಾರೂ ಹೋಗಿ ತೊಗೊಂಬರ್ತೀನಿ.

(ಹಿಂದಿನಿಂದ ಬಂದು ಚಂದ್ರಪ್ಪ ಅವಳ ರಟ್ಟೇ ಹಿಡಿದೆಳೆಯುತ್ತಾನೆ)

**ಲಕ್ಷ್ಮಿ:** ಯಾಕಲಲ? ಹೆಂಗೈತಿ ನಿನ್ ಮೈಯಾಗ?

**ಚಂದ್ರಪ್ಪ:** ಮೈಯಾಗ್ ಸರಿ ಇಲ್ಲದ್ದಕ್ಕೇ ನಿನ್ನ ಹಿಡ್ಕಂಡಿರೋದು. ಒಂದೀಟು ಬಾಲ್ಲಾ....

**ಲಕ್ಷ್ಮಿ:** ಆಂ . . ಎಲ್ಲಿಗ್ ಬರ್ಬೇಕ? ಮಂದ್ಯಾಗ ಒಂದೀಟು ನಮ್ ಕೈ ತಾಗಿದ್ರ ಮುಳ್ಳು ಚುಚ್ಚದಂಗ ಅಟ್ಟೂದ್ದ ಹಾರ್ತೀರಿ ... ಥೂ ಹೊಲೇರೂ.. ಅಂತ ಜಿಗೀತೀರಿ..ಈಗ ಮಂದೀ ಇಲ್ಲದಾಗ ಸಂದ್ಯಾಗ ಹಿಡ್ಕೊಳ್ಳಾಕೆ ಬರ್‌ತ್ತೀರಾ? ಮಾಡ್ತೀನಿ ತಡೀರಿ. . . ಜೋರು ಬಾಯ್ ಮಾಡ್ಲಾ? ಹೊಕ್ಕೋಳ್ಳಾಕ ಶುರು ಮಾಡಿದ್ನೀ ಅಂದ್ರ ಬೋರ್ ಹಂತ್ಯಾಕ್ ಇರೋ ಮಂದಿಯೆಲ್ಲಾ ಓಡಿ ಬರ್ತಾರ.. ಅಲ್ಲಿ ನಿಮ್ ಹೆಂಡ್ತೀನೂ ಇರ್ತಾಳ ತಿಳ್ಕೋರಿ... ಚೀರ್ಲಾ? (ಬಾಯಿ ತೆರೆಯುತ್ತಿದ್ದಂತೆ ಚಂದ್ರಪ್ಪ ಜಾಗ ಖಾಲಿ ಮಾಡ್ತಾನೆ)

## ದೃಶ್ಯ–2

(ಶಾಂತಾಳ ಬಿಂದಿಗೆ ಇನ್ನೇನು ತುಂಬಲಿದೆ. ನೀರು ಹೊಡೆಯುತ್ತಿದ್ದವಳನ್ನು ಉದ್ದೇಶಿಸಿ) ಶಾಂತಾ ಆ ನಳಾ ನಿಲ್ಸು. ನನ್ನ ಕೊಡಾ ತುಂಬ್ತು.

**ಲಕ್ಷ್ಮಿ** – (ಓಡಿಕೊಂಡು ಬಂದು) ತಡಿತಡಿ ನಿಲ್ಸ್‌ಬ್ಯಾಡ,

(ಎನ್ನುತ್ತ ಬಿಂದಿಗೆ ಇಡುವಾಗ ಅದು ಶಾಂತಾಳ ಬಿಂದಿಗೆಗೆ ತಗಲುವುದು)

**ಶಾಂತಾ** – (ಮುಖ ಸಿಂಡರಿಸಿಕೊಂಡು) ಥೇ! ಯಾಕ? ಮೈಮ್ಯಾಲೇ ಬೀಳಾಕ್ ಹತ್ತೀಯಲ್ಲ?.. ನೋಡ್ಕೊಂಡು ನಡೀ ಸ್ವಲ್ಪ.

**ಲಕ್ಷ್ಮಿ** – ನಾನೆಲ್ಲಿ ಬಿದ್ದೇರೀ.. ನಿಮ್ ಮೈಗೆ ನನ್ನ ಮೈಯೇ ಹತ್ತಿಲ್ಲ. ಅಲ್ಲಿ ಕೊಡ ಸ್ವಲ್ಪ ಹತ್ತ ಅಷ್ಟೇ.. ಅಲ್ಲೇನು?

ಶಾಂತಾ ಆ ಕೊಡಾನಾರೂ ಯಾಕ್ ಮುಟ್ಬೇಕು ಹೇಳು? ಸ್ವಲ್ಪ ತಡಕೊಳ್ಳಾಕ್ಕಾಗಂಗಿಲ್ಲೇನು? ಕಾಣ್ತೈತಿಲ್ಲೋ ಕಣ್ಣು?

**ಲಕ್ಷ್ಮಿ** – ಕಣ್ ಕಾಣ್ದೇ ಏನ್ರೀ? ಹಂಗ್ಯಾಕೆ ಕೇಳ್ತೀರಿ? ಒಂಚೂರು ಕೊಡ್ವಾನ ತಾಕಿದ್ರೆ ಇಷ್ಟೊಂದು ಮಾತಾಡ್ತೀರಿ... ನಿಮ್ಮನೆ ಗಂಡಸ್ರು ಬಂದು ನಮ್ಮ್ ಮೈಮ್ಯಾಲೆ ಬೀಳ್ತಾರಲ್ಲ, ಆಗ? ಮೈಲ್ಗಿ ಆಗಂಗಿಲ್ಲಾ??? (ಶಾಂತ ಸುಮ್ಮನೆ ನಿಲ್ಲುವಳು.)

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

## ದೃಶ್ಯ–3

(ಲಕ್ಷ್ಮಿ ಗಂಡ ಕರಿಯಪ್ಪ ಬರುತ್ತಾನೆ. ಅವನನ್ನು ಶಾಂತಾ ನೋಡುವಳು)

**ಶಾಂತಾ–** ಏ ಕರಿಯಪ್ಪ, ನಮ್ಮ್ ಪಿಟ್ ಗುಂಡಿ ತುಂಬೈತಿ, ಎಷ್ಟ್ ಸಲಾನೋ ಹೇಳಿ ಕಳ್ಸದು, ಬಂದು ತಗಿ ಬಾ ಇವತ್ತು.

(ಕೇಳಿಸಿಕೊಂಡ ಲಕ್ಷ್ಮಿ ಈಚೆ ಬಂದು)

**ಲಕ್ಷ್ಮಿ–** ನೀವ್ ಹೇತಿದ್ದು ನಿಮ್ಗೆ ಅಸಯ್ಯ, ಅದನ್ನ ಎತ್ತಾಕಿ ನೀವ್ ಮಡಿ ಆಗಾಕೆ ನಾವ್ ಬೇಕಾ? ನಿಮ್ಮನೆ ಗಂಡಸ್ರು ಏಲಿದ್ದಂಗೆ ನಮ್ ಮ್ಯಾಲೆ ಬಿದ್ರೆ ನಮ್ಗು ಮೈಲ್ಗೆ ಆಕೈತಿ. ನೀವೆ ಹೋಗ್ ಎತ್ತಾಕ್ರೀ.. ದೋ..ಡ್ಡ ... ಬಂದ್ಬಿಟ್ಲು ಅಕ್ಕ.

### ಯಾಕೆ ಯಾಕೆ ಯಾಕೆ...?

ಸುಮಾರು ಒಂದುನೂರು ವರುಷಗಳ ಹಿಂದೆ (1901) ಪಶ್ಚಿಮ ಭಾರತದ ಮಹಾರಾಷ್ಟ್ರ ರಾಜ್ಯದ ಸತಾರ ಜಿಲ್ಲೆಯ ಒಂದು ಹಳ್ಳಿಯಲ್ಲಿ, ನಮ್ಮ ನಿಮ್ಮ ಊರುಗಳಲ್ಲಿ ಇರುವ ಹಾಗೆಯೇ ಒಂದು ಶಾಲೆ ಇತ್ತು. ಅಂದಿನ ಆ ಶಾಲೆಯನ್ನು ಒಮ್ಮೆ ಇಣುಕಿ ನೋಡಿದ್ದಿದ್ದರೆ, ಆ ಶಾಲೆಯಲ್ಲಿ ಒಂದು ವಿಚಿತ್ರ ಪರಿಸ್ಥಿತಿ ಕಾಣಬಹುದಿತ್ತು. ಅದೇನೆಂದರೆ ಆ ಶಾಲೆಯಲ್ಲಿ, ಎಲ್ಲಾ ಮಕ್ಕಳು ಜೊತೆಗೆ ಕುಳಿತಿದ್ದರೆ, ಒಬ್ಬ ಹುಡುಗ ಮಾತ್ರ ಯಾರಿಗೂ ಸೇರದಂತೆ ಒಂದು ಮೂಲೆಯಲ್ಲಿ ಕುಳಿತಿರಬೇಕಾಗಿತ್ತು. ಆ ಹುಡುಗನ ಹೆಸರು ಭೀಮಾ. ಈ ಭೀಮಾನನ್ನು ಯಾಕೆ ಆಚೆಗೆ ಕೂರಿಸುತ್ತಿದ್ದರು ಗೊತ್ತಾ? ಜಾತಿ ಕಾರಣಕ್ಕಾಗಿ. ಆತ ಮಹಾರ್ ಜಾತಿಗೆ ಸೇರಿದವನು. ಮುಟ್ಟಿಸಿಕೊಳ್ಳಬಾರದ ಜಾತಿಯವನು ಅಂತ ಅವನನ್ನು ದೂರ ಕೂರಿಸುತ್ತಿದ್ದರು. ಯಾರೂ ಅವನ ಜೊತೆ ಆಟ ಆಡುತ್ತಿರಲಿಲ್ಲ, ಮುಟ್ಟಿಸಿಕೊಳ್ಳುತ್ತಿರಲಿಲ್ಲ, ಅವನ ಬಳಿ ಮಾತಾಡುತ್ತಲೂ ಇರಲಿಲ್ಲ. ಅವನ ಟೀಚರುಗಳು ಕೂಡಾ ಅವನನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಅವನ ಪುಸ್ತಕ ನೋಡುತ್ತಿರಲಿಲ್ಲ. ಅವನು ಕುಳಿತುಕೊಳ್ಳುವ ಜಾಗ ಯಾರೂ ಸ್ವಚ್ಛ ಮಾಡುತ್ತಿರಲಿಲ್ಲ. ಅವನೇ ತನ್ನ ಗೋಣಿತಾಟು ತಂದು ಕುಳಿತುಕೊಳ್ಳಬೇಕಾಗಿತ್ತು, ಅದನ್ನು ಅವನೇ ತೆಗೆದುಕೊಂಡು ಹೋಗಬೇಕಾಗಿತ್ತು. ಆ ಕಾಲದಲ್ಲಿ ಇದು ಸಾಮಾನ್ಯವಾಗಿತ್ತು.

ಅವನು ಆ ಶಾಲೆಯಲ್ಲಿ ಇನ್ನೊಂದು ವಿಷಯಕ್ಕೆ ಕಷ್ಟ ಪಡುತ್ತಿದ್ದ. ಅದೇನೆಂದರೆ ಅವನಿಗೆ ಬೇಕಾದಾಗ ಕುಡಿಯಲು ನೀರು ಸಿಗುತ್ತಿರಲಿಲ್ಲ. ಬೆಲ್ ಬಡಿದ ತಕ್ಷಣ ಮಕ್ಕಳೆಲ್ಲಾ ಹೊರಗೆ ಹೋಗೋರು, ನಲ್ಲಿಯಿಂದ ನೀರು ಕುಡಿಯೋರು. ನಲ್ಲಿ ನೀರು ಬಿಡುವವನು, ಎಲ್ಲಾ ಮಕ್ಕಳಿಗೆ ನೀರು ಕುಡಿಸುತ್ತಿದ್ದ, ಆದರೆ ಕೊನೆಯಲ್ಲಿ ಭೀಮಾಗೆ ಮಾತ್ರ ನೀರು ಸಿಗುತ್ತಿರಲಿಲ್ಲ. ಯಾಕೆ ಅಂದರೆ ಭೀಮ ನಲ್ಲಿ ಮುಟ್ಟುವ ಹಾಗೆ ಇರಲಿಲ್ಲ. ಆ ನೀರು ಪಂಪ್ ಮಾಡುವವನು ನೀರು ಹಿಡಿದು ಭೀಮಾಗೆ ಪ್ರತ್ಯೇಕವಾಗಿ ನೀಡಬೇಕಾಗಿತ್ತು. ಇದಕ್ಕಾಗಿ ಆ ಶಾಲೆಯಲ್ಲಿ ಭೀಮಾಗೆ ನೀರು ಬೇಕಾದಾಗ ನೀರು ಸಿಗುತ್ತಿರಲಿಲ್ಲ. ಅದೆಷ್ಟೋ ಕಾಲ ಹೀಗೇ ನಡೆದಿತ್ತು. ಮೇಷ್ಟ್ರ ಹತ್ತಿರ ಕೇಳಿದರೆ ಅವರು ಹೆಚ್ಚು ಗಮನ ಕೊಡುತ್ತಿರಲಿಲ್ಲ, ಹಾಗೂ ಮೇಷ್ಟ್ರು ಪಂಪ್‌ನವನ ಬಳಿ ಹೇಳಿದರೆ, ಅವನು, “ಅಯ್ಯೋ, ಎಲ್ಲಾ ಮಕ್ಕಳಿಗೆ ನೀರು ಕುಡಿಸೋ ಹೊತ್ತಿಗೆ ನನಗೆ ಸಾಕಾಗುತ್ತೆ, ಆಮೇಲೆ ಇವನಿಗೆ ಬೇರೆ ಕೊಡಬೇಕು”

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಅಂತ ನಿರ್ಲಕ್ಷ್ಯ ಮಾಡುತ್ತಿದ್ದ.

ಹೇಗಾಗಿದ್ದಿರಬಹುದು ಆ ಪುಟ್ಟ ಹುಡುಗನ ಮನಸ್ಸಿಗೆ!? ಅವನು ಓದಲಿಕ್ಕೆ ಬಂದಿದ್ದ. ತುಂಬ ಜಾಣಹುಡುಗನಾಗಿದ್ದ. ಮುಂದೆ ಓದುವ ಆಸೆ ತುಂಬಾ ಇತ್ತು. ಅವನ ಮನೆಯಲ್ಲಿ ಓದಿದವರು ಇದ್ದರು, ಮತ್ತು ಆ ಸಮಯದಲ್ಲಿ ಸರಕಾರಿ ಶಾಲೆಯಲ್ಲಿ ಎಲ್ಲರೂ ಕಲಿಯಲು ಅವಕಾಶ ಮಾಡಿಕೊಡಬೇಕು ಅನ್ನುವ ಕಾನೂನು ಬಂದಿತ್ತು. ಹಾಗಾಗಿ ಅವನಿಗೆ ಶಾಲೆಗೆ ಬರಲು ಸಾಧ್ಯವಾಗಿತ್ತು. ಆದರೆ ಅಲ್ಲಿನ ಪರಿಸ್ಥಿತಿ ಹೀಗಿತ್ತು.

ಪುಟ್ಟ ಭೀಮ ದಿನಾ ಬಂದು ಮೀರಾ ಅತ್ತೆಯ ಹತ್ತಿರ ಕೇಳುತ್ತಿದ್ದ, "ನಾನೇಕೆ ಎಲ್ಲರ ತರಹ ನಲ್ಲಿ ತಿರುಗಿಸಿ ನೀರು ಕುಡಿಯಬಾರದು..?"

"ನಾವು ಅಸ್ಪೃಶ್ಯರು, ಮುಟ್ಟಿಸಿಕೊಳ್ಳಬಾರದು, ಅದಕ್ಕೆ" ಎಂದು ಅತ್ತೆ ಎಂದರೆ,

"ನಾನು ಅವರಿಗಿಂತಲೂ ಶುಚಿಯಾಗಿದ್ದೇನೆ, ಆದರೂ?' ಎಂಬ ಮರುಪ್ರಶ್ನೆ ಇರುತ್ತಿತ್ತು. ಪ್ರಶ್ನೆ ಮೇಲೆ ಪ್ರಶ್ನೆ ಪುಟ್ಟ ಭೀಮನನ್ನು ಕಾಡುತ್ತಿದ್ದವು. ಅವರಿಗೊಂದು ಕಾನೂನು, ನಮಗೊಂದು ಕಾನೂನು, ಅದು ಯಾಕೆ?

- ಸಾರ್ವಜನಿಕ ನಲ್ಲಿಯಲ್ಲಿ ನಮಗೆ ನೀರಿಲ್ಲ ಯಾಕೆ?
- ಕ್ಷೌರಿಕರು ನಮ್ಮ ತಲೆ ಮುಟ್ಟುವುದಿಲ್ಲ ಯಾಕೆ?
- ಅಗಸರು ನಮ್ಮ ಬಟ್ಟೆ ಮಡಿ ಮಾಡುವುದಿಲ್ಲ ಯಾಕೆ?
- ನಾವು ದುಪ್ಪಟ್ಟು ಹಣ ಕೊಟ್ಟರೂ ನಮ್ಮ ಬಟ್ಟೆ ಮುಟ್ಟುವುದಿಲ್ಲ ಯಾಕೆ?

ಹೀಗೆ ಕೇಳುತ್ತಾ, ತಿಳಿದುಕೊಳ್ಳುತ್ತಾ ಓದಿಓದಿ ಭೀಮ ದೊಡ್ಡವನಾಗುತ್ತಾನೆ. ಅವರೇ ಭೀಮ್‌ರಾವ್ ರಾಮ್‌ಜಿ ಅಂಬೇಡ್ಕರ್. ಭಾರತದಲ್ಲಿ ಕಾಲೇಜು ಶಿಕ್ಷಣ ಮುಗಿಸಿ, ಉನ್ನತ ವಿದ್ಯಾಭ್ಯಾಸಕ್ಕೆ ಅಮೆರಿಕಕ್ಕೆ ಹೋಗುತ್ತಾರೆ. ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿ ಪಡೆಯುತ್ತಾರೆ. ಬ್ರಿಟನಿನ ಗ್ರೇಸ್ ಇನ್ ಕಾನೂನು ವಿದ್ಯಾಲಯದಲ್ಲಿ ಓದಿ ಬ್ಯಾರಿಸ್ಟರ್ ಆಗುತ್ತಾರೆ. ಭಾರತಕ್ಕೆ ಹಿಂದಿರುಗಿದ ಅಂಬೇಡ್ಕರ್ ಅವರು ಸಮಾನತೆಯ ಸಮಾಜದ ಕನಸು ಕಾಣುತ್ತಾ ಸಂಘಟನೆ ಕಟ್ಟುತ್ತಾರೆ, ಹೋರಾಟ ರೂಪಿಸುತ್ತಾರೆ, ಪತ್ರಿಕೆಗಳನ್ನು ಶುರು ಮಾಡಿ ಹಲವಾರು ಪುಸ್ತಕ ಬರೆಯುತ್ತಾರೆ, ಕಾನೂನು ಹೋರಾಟದ ಮೂಲಕ ದೇವಾಲಯ ಪ್ರವೇಶ, ರಾಜಕೀಯ ಪ್ರಾತಿನಿಧ್ಯವೂ ಸೇರಿದಂತೆ ದಲಿತರು ನಾಗರಿಕ ಹಕ್ಕುಗಳ ಪಡೆಯಲು ಹೋರಾಡುತ್ತಾರೆ. ಕೊನೆಗೆ ಸ್ವತಂತ್ರ ಭಾರತದ ಕಾನೂನು ಮಂತ್ರಿಯಾಗಿ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತಕ್ಕೆ ವಿಶ್ವದ ಅತ್ಯುತ್ತಮ ಸಂವಿಧಾನಗಳಲ್ಲಿ ಒಂದು ಎಂದು ಬಣ್ಣಿಸಲ್ಪಟ್ಟ, ಸರ್ವಸಮಾನತೆಯನ್ನು ಸಾರುವ ಸಂವಿಧಾನವನ್ನು ರೂಪಿಸುತ್ತಾರೆ.

ಆದರೇನು, ಸಂವಿಧಾನ ಈ ದೇಶದಲ್ಲಿ ಎಲ್ಲರೂ ಸಮಾನರು ಎಂದು ಹೇಳಿ 68 ವರ್ಷಗಳೇ ಕಳೆದರೂ, ಇಂದಿಗೂ ನಮ್ಮ ಸುತ್ತುಮುತ್ತು ಜಾತಿ ಹೆಸರಿನಲ್ಲಿ ತಾರತಮ್ಯ ಮಾಡುತ್ತಾರೆ, ದೌರ್ಜನ್ಯ-ಕೊಲೆ-ಅತ್ಯಾಚಾರ ನಡೆಸುತ್ತಾರೆ. ಕೆಳಕಂಡ ಅಂಕಿ ಅಂಶ ಗಮನಿಸಿ:

Edited with the trial version of Foxit Advanced PDF Editor
To remove this notice, visit: www.foxitsoftware.com/shopping

- ಕರ್ನಾಟಕದಲ್ಲಿ ಶೇ.52.71 (38.37ಲಕ್ಷ)ದಷ್ಟಿರುವ ದಲಿತ ಅಕ್ಷರಸ್ಥರಲ್ಲಿ ಪುರುಷರು ಶೇ.62.58ರಷ್ಟಿದ್ದರೆ ಮಹಿಳೆಯರು ಶೇ.40.23ರಷ್ಟಿದ್ದಾರೆ. ಸಾಕ್ಷರತೆ ಪರಿಶಿಷ್ಟ ಮಹಿಳೆಯರಲ್ಲಿ 40.23ರಷ್ಟಿದ್ದರೆ, ಶಿಷ್ಟ ಮಹಿಳೆಯರ ಪ್ರಮಾಣ 63.39ರಷ್ಟಿದೆ.
- ಉದ್ಯೋಗದ ವಿಷಯಕ್ಕೆ ಬಂದಾಗ 13.8 ಕೋಟಿಯಷ್ಟಿರುವ ದಲಿತರ ಒಟ್ಟು ಜನಸಂಖ್ಯೆಯಲ್ಲಿ ಮೀಸಲಾತಿ ಮೂಲಕ ಉದ್ಯೋಗ ಪಡೆದುಕೊಂಡಿರುವ ದಲಿತರ ಸಂಖ್ಯೆ 13 ಲಕ್ಷಗಳನ್ನೂ ದಾಟುವುದಿಲ್ಲ, ಅಂದರೆ ಕೇವಲ 1% ಮಾತ್ರ. ಇದರಲ್ಲಿ ಮಹಿಳೆಯರ ಸಂಖ್ಯೆ ಇನ್ನೂ ಕಡಿಮೆ ಇದೆ. ಕರ್ನಾಟಕದಲ್ಲಿ ಸುಮಾರು ಶೇ.71.41ರಷ್ಟು ಮಹಿಳಾ ದುಡಿಮೆಗಾರರು ಕೃಷಿಯನ್ನು ಅವಲಂಬಿಸಿದ್ದಾರೆ.
- ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸಿಗುವ ಸರ್ಕಾರದ ಅನುದಾನ 3000 ಕೋಟಿ. ಅದರಲ್ಲಿ ಪ.ಜಾ ಮತ್ತು ಪ.ಪಂ.ದವರಿಗೆ ಮೀಸಲಿಡಬೇಕಾದ ಅನುದಾನ 750 ಕೋಟಿ. ವಾಸ್ತವದಲ್ಲಿ ಅದಿನ್ನು 200–250 ಕೋಟಿಯನ್ನೂ ದಾಟಿಲ್ಲ.

**ನ್ಯಾಷನಲ್ ಕ್ರೈಂ ಬ್ಯೂರೋ ಅಂಕಿ–ಅಂಶದ ಪ್ರಕಾರ ದಲಿತೇತರರಿಂದ ದಲಿತರ ಮೇಲಾಗುವ ಅಪರಾಧಗಳು:**

- ಪ್ರತಿ 16 ನಿಮಿಷಗಳಿಗೆ ದಲಿತ ವ್ಯಕ್ತಿಯ ಮೇಲೆ ಅಪರಾಧ ಎಸಗಲಾಗುತ್ತದೆ.
- ಪ್ರತಿ ದಿನವೂ ನಾಲ್ಕು ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಎಸಗಲಾಗುತ್ತದೆ.
- ಪ್ರತಿ ವಾರ 13 ಜನ ದಲಿತರ ಕೊಲೆಯಾಗುತ್ತದೆ ಮತ್ತು 6 ಜನ ದಲಿತರ ಅಪಹರಣವಾಗುತ್ತದೆ
- ದೌರ್ಜನ್ಯ, ಅತ್ಯಾಚಾರ, ಕೊಲೆ, ಹಲ್ಲೆ ಮತ್ತು ಮನೆಗಳಿಗೆ ಬೆಂಕಿ ಇಡುವಂಥ ಸುಮಾರು 3,71,942ರಷ್ಟು ಅಪರಾಧಗಳು 1995–2007ರಲ್ಲಿ ಜರುಗಿವೆ.

**ಅಸ್ಪೃಶ್ಯತೆ ಆಚರಣೆ**

ಭಾರತದ 11 ರಾಜ್ಯಗಳಲ್ಲಿನ 565 ಹಳ್ಳಿಗಳಲ್ಲಿ ಅಸ್ಪೃಶ್ಯತೆ ಆಚರಣೆ ಕುರಿತು ನಡೆಸಲಾದ ಅಧ್ಯಯನ ಒಂದರಲ್ಲಿ ಕಂಡು ಬಂದ ಅಂಶಗಳೇನೆಂದರೆ,

- 33% ನಷ್ಟು ಹಳ್ಳಿಗಳಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಗಳು ದಲಿತರ ಕಾಲೋನಿಗಳಿಗೆ ಭೇಟಿ ನೀಡಿರಲಿಲ್ಲ
- 27.6%ನಷ್ಟು ಹಳ್ಳಿಗಳಲ್ಲಿ ದಲಿತರಿಗೆ ಪೊಲೀಸ್ ಠಾಣೆಗಳಲ್ಲಿ ಪ್ರವೇಶವನ್ನು ನಿಷೇಧಿಸಲಾಗಿತ್ತು
- 37.8%ನಷ್ಟು ಹಳ್ಳಿಗಳಲ್ಲಿ ದಲಿತರ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಪ್ರತ್ಯೇಕವಾಗಿ ಕುಳಿತು ಊಟ ಮಾಡಬೇಕಿತ್ತು
- 23.5%ನಷ್ಟು ಹಳ್ಳಿಗಳಲ್ಲಿ ಅಂಚೆ ನೌಕರರು ದಲಿತರ ಮನೆಗಳಿಗೆ ಹೋಗಿ ಪತ್ರಗಳನ್ನು ಬಟವಾಡೆ ಮಾಡುತ್ತಿರಲಿಲ್ಲ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

- 48.4%ನಷ್ಟು ಹಳ್ಳಿಗಳಲ್ಲಿ ದಲಿತರಿಗೆ ಸಾರ್ವಜನಿಕ ನೀರು ಪೂರೈಕೆ ಸ್ಥಳಗಳಲ್ಲಿ ನೀರು ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿತ್ತು.

ಒಟ್ಟು ಜಿಡಿಪಿಯ 1/4 ಭಾಗದಷ್ಟು ಸಂಪತ್ತನ್ನು ನಮ್ಮ ದೇಶದ 100 ಜನ ಹೊಂದಿದ್ದಾರೆ. 1.2 ಬಿಲಿಯನ್‌ನಷ್ಟಿರುವ ನಮ್ಮ ದೇಶದ ಜನಸಂಖ್ಯೆಯಲ್ಲಿ 800 ಮಿಲಿಯನ್ ಜನರು ನಿತ್ಯ ರೂ.20 ಕ್ಕಿಂತಲೂ ಕಡಿಮೆ ಹಣದಲ್ಲಿ ಬದುಕುತ್ತಾರೆ.

ಈಗ ಹೇಳಿ, ಸರ್ವಸಮಾನತೆಯ ಸಂವಿಧಾನ ಹೊಂದಿ ಏಳು ದಶಕ ಕಳೆದ ಮೇಲೂ ಜಾತಿ ಹೆಸರಿನ ತಾರತಮ್ಯ, ಅವಮಾನ, ವಂಚನೆ, ದೌರ್ಜನ್ಯ ನಡೆಯುತ್ತಿರುವುದು; ಸಂಪತ್ತಿನ ತೀವ್ರ ಅಸಮಾನ ಹಂಚಿಕೆಯಾಗಿರುವುದು ಮಹಾನ್ ಭಾರತದ ಹಿರಿಮೆಗೆ ಕಪ್ಪುಚುಕ್ಕೆ ಇಟ್ಟಂತೆ ಅಲ್ಲವೆ?

## ಶಾಲೆ ಬಿಟ್ಟಿದ್ದು ಯಾಕೆ?

(ಮೇಘಾ ತನ್ನ ತಾಯಿ ಸಂಗೀತಾ ಕೈಯಲ್ಲಿ ಜಡೆ ಹಾಕಿಸಿಕೊಳ್ಳುತ್ತಾ ತಾಯಿಯನ್ನು ಮಾತಿಗೆಳೆಯುತ್ತಾಳೆ)

**ಮೇಘಾ:** ಅವ್ವಾ, ನಿನ್ನೆ ನಮ್ಮ ಸಾಲ್ಯಾಗ ನೀವೆಲ್ಲಾ ದೊಡ್ಡಾವ್ರ ಆದಮ್ಯಾಲ ಏನ ಆಗ್ತೀರಿ ಅಂತ ಟೀಚರ ಕೇಳಾಕತ್ತಿದ್ರು. ನನ್ನ ಗೆಳತಿ ಸ್ಮಿತಾ ಅದಾಳಲ್ಲ್ ಆಕಿ ನಾ ಟೀಚರ ಆಗ್ತೇನಿ ಅಂದ್ಲು. ಬಾಜು ಮನಿ ರಮೇಶ ಅದಾನಲ್ಲ, ಅಂವ ಕಂಡಕ್ಟರ ಆಕ್ಕಾನಂತ. ಮತ್ತ ಸಂಜನಾ ಬ್ಯಾಂಕಿನ್ಯಾಗ ಕೆಲಸಾ ಮಾಡ್ತಾಳಂತ. ಪ್ರೀತಿ ಡಾಕ್ಟರ ಆಕ್ಕಾಳಂತ.

**ಸಂಗೀತಾ:** ಬರೇ ಅವ್ರು ಇವ್ರು ಅಂತನ ಹೇಳಾಕತ್ತೀದಿ. ನೀ ಏನ ಆಗ್ತಿ ಅಂತ ಹೇಳಲ್ಲ.

**ಮೇಘಾ:** ನಾನು. . . ನಾ ಭಾಳಷ್ಟ ಸಾಲಿ ಕಲತ ವಕೀಲ ಆಗ್ತೇನಿ. ಅವ್ವಾ ನೀ ಯಾಕ ಸಾಲಿ ಕಲೀಲಿಲ್ಲ? ನಿಮ್ಮ ಸಾಲ್ಯಾಗ ಟೀಚರ, "ನೀ ಏನ ಮಾಡಾಕಿ" ಅಂತ ಕೇಳಲಿಲ್ಲ ಏನು?

**ಸಂಗೀತಾ:** ಭಾಳ ಮನಸ ಇತ್ತ ಮಗಳ ನನಗೂ ಸಾಲಿ ಕಲೀಬೇಕೆಂತ. ಆದ್ರ ಏನ ಮಾಡೂದು. 8 ನೇತ್ತೆ ಸಾಲಿ ಕಲೀಬೇಕು ಅಂದ್ರ ಮೂರು ಕಿ. ಮೀ. ನಡಕೊಂಡ ಹೋಗಬೇಕಾಗತಿತ್ತು. 8ನೇತ್ತೆಕ್ಕ ನನ್ನ ಹೆಸರೂ ಹಚ್ಚಿದ್ರು. ಆದ್ರ 8ನೇತ್ತೆ ಸುರು ಆಗಿ ಒಂದ ತಿಂಗಳದಾಗನ ನಾ ದೊಡ್ಡಾಕಿ ಆದೆ. ಆಗ ಸುರು ಮಾಡಿತಲ್ಲ ನಮ್ಮನ್ಯಾಗಿನ ಆಯಿ. "ಹುಡಿಗೆ ದೊಡ್ಡಾಕಿ ಆಗಿದಾಳು. ಇನ್ನ ಆಕಿನ್ನ ಅಷ್ಟ ದೂರದ ಸಾಲೀಗಿ ಕಳಸಬ್ಯಾಡ್ರಿ. ಈಗಿನ ಕಾಲ ಚಲೋ ಇಲ್ಲ. ಯಾರ ಹೆಂಗ ಅಂತ ಹೇಳಾಕ ಬರೂದುಲ್ಲ. ಸಾಲೀಗಂತ ದಿನಾ ಮೂರ ಕೀ.ಮೀ ನಡಕೋತ ಹೋಗಿ ನಡಕೋತ ಬರೂವಾಗ ಏನಾರ ಎಡವಟ್ಟ ಆತು ಅಂದ್ರ ಯಾರ ಜವಾಬ್ದಾರಿ? ಮನ್ಯಾಗನ ಇರ್ಲಿ ಹುಡಿಗಿ. ಮನಿ ಕೆಲಸಾನೂ ಕಲೀಬೇಕಲ್ಲ ಮತ್ತ. ನಾಳೆ ಮಾಡ್ಕೊಂಡ ಗಂಡಗ ಅಡಿಗಿ ಮಾಡಿ ಹಾಕಾಕ ಬ್ಯಾಡಾ?" ಅಂತ ಒಂದ ಸಮನ ನಮ್ಮಪ್ಪನ ಬೆನ್ನ ಹತ್ತಿ ನನ್ನ ಸಾಲಿ ಬಿಡಿಸಿದ್ಲು.

**ಮೇಘಾ:** ಮುಂದ?

**ಸಂಗೀತಾ:** ಮುಂದೇನ, ಒಂದ ವರ್ಷ ಮನ್ಯಾಗ ಕೂಡಿಸಿದ್ರು. ದೊಡ್ಡಾಕಿ ಆದ ಹುಡಿಗಿನ್ನ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಎಷ್ಟ ದಿನಾ ಅಂತ ಮನ್ಯಾಗ ಇಟಗೊಂಡ ಕುಂಡರತಿ? ಲಗೂ ಮದಿವಿ ಮಾಡ್ರಿ ಅಂತ ನಮ್ಮ ಅವ್ವ ಅಪ್ಪಗ ಹಿರೇರ ಅನ್ನಾಕ ಸುರು ಮಾಡಿದ್ರು. ಭಾಳ ದಿನಾ ಮನ್ಯಾಗ ಇಟಗೊಂಡ ಕುಂತ್ರ ಹುಡಿಗಿ ಮಾರಿಮ್ಯಾಲಿನ ಎಳೇ ಕಳೆ ಹೋಗತೈತಿ, ಅಮ್ಯಾಲ ಹುಡಿಗ್ಯಾರ್ನ ಖಪ್ಸೂದ ಕಠಿಣ ಆಕ್ಕೈತಿ ಅಂತ ಹೇಳಿಕೋತನ ಅಲ್ಲಿ ಛಲೋ ಮನಿತನಾ ಐತಿ, ಇಲ್ಲಿ ಹುಡುಗ ಛಲೋ ನೌಕರಿ ಒಳಗ ಅದಾನ, ಅಂತ ಹುಡುಕಾಟಾ ಮಾಡಿ ನಿಮ್ಮ ಅಪ್ಪಾಗ ನನ್ನ ಗಂಟ ಹಾಕಿದ್ರು. ಅಮ್ಯಾಲ ಏನ ಅಂತಿ. ಅಡಿಗಿ ಮನೀನ ನನ್ನ ಸಾಲಿ ಆತು.

**ಮೇಘಾ:** ನಿಮ್ಮ ಗೆಳತ್ಯಾರ ಯಾರೂ ಸಾಲಿ ಕಲೀಲೇ ಇಲ್ಲ ಅವ್ವ?

**ಸಂಗೀತಾ:** ಎಲ್ಲೋ ಒಂದಿಬ್ರ ಮೂರಮಂದಿ ಕಾಲೇಜ ಕಟ್ಟಿ ಹತ್ತಿದರೇನೋ. ಉಳಿದಾವರೆಲ್ಲ 8 ನೇತ್ತೆ, 9ನೇತ್ತೆಕ್ಕನ ಸಾಲಿ ಬಿಟ್ರು. ಪ್ರತಿಯೊಬ್ರದ್ದೂ ಒಂದೊಂದ ಸಮಸ್ಯೆ. ನನ್ನ ಜೀವದ ಗೆಳತಿ ರೇಖಾ ನಾ ಸಾಲಿ ಬಿಟ್ಟ ಕೂಡಲೇ ತಾ ಒಬ್ಬಾಕಿನ ಆಕ್ಕೇನಿ ಅಂತ ಸಾಲಿ ಬಿಟ್ಲು. ನಮ್ಮ ಬಾಜೂ ಹಳ್ಳಿಯಿಂದ ಬರೂ ಸಾವಿತ್ರಿಗೆ ಅವರ ಅಪ್ಪನ ಕುಡಿತದ ಸಮಸ್ಯೆ. ಅಂವ ಕುಡದ ಬಂದಾ ಅಂದ್ರ ಯಾತರದ್ದೂ ಖಬರ ಇರ್ತಿರಲಿಲ್ಲ. ಕೈಗಿ ಸಿಕ್ಕದ್ದ ತಗೊಂಡ ಒಗೀತಿದ್ದ. ಕೈಗ ಸಿಕ್ಕ ಪುಸ್ತಕ ತಗೊಂಡ ಹರೀತಿದ್ದ. ಸಾವಿತ್ರಿ ಪುಸ್ತಕ, ನೋಟಬುಕ್ಕು ಎಲ್ಲಾ ಇವನ ಕೈಯ್ಯಾಗ ಉದ್ಧಾರ ಆದು. ಟೀಚರ ಹೋಂವರ್ಕ್ ತೋರ್ಸು ಅಂದ್ರ ಪಾಪ ಆಕಿ ಎಲ್ಲಿಂದ ತೋರ್ಸ್ ಬೇಕು? ಟೀಚರ್ ಶಿಕ್ಷಾ ಕೊಡತಿದ್ರು. ಸಾವಿತ್ರೀಗಿ ಭಾಳ ಅಪಮಾನ ಆಗೂದು. ಗೆಳತ್ಯಾರಿಗೆ ಮುಖ ತೋರ್ಸಲಿಕ್ಕೆ ಆಗದ ಆಕಿ ಸಾಲಿ ಬಿಟ್ಲು.

**ಮೇಘಾ:** ಮತ್ತ ಸವಿತಾ ಅಂಟಿ? ಅವ್ರೂ ನಿನ್ನ ಜೋಡೀನ ಸಾಲಿಗೆ ಬರತಿದ್ರ ಹೌದಿಲ್ಲೊ?

**ಸಂಗೀತಾ:** ಹಂ. ಸವಿತಾ ಅಂಟೀದ ಒಂದ ಕಥೀನ ಬ್ಯಾರೆ. ಖರೇ ಅಂದ್ರ ಆಕಿ ಅಭ್ಯಾಸದಾಗ ಭಾಳ ಹುಷಾರ ಇದ್ಲು. ಆದ್ರ ಭಾಳ ಲಗೂನ ಸಾಲಿ ಬಿಟ್ಲು. ಅವರ ಮನೀ ಒಳಗ ಭಾಳ ಬಡತನ. ಆಕಿ ಅವ್ವ ಅಪ್ಪ ಇಬ್ರೂ ಕೂಲಿ ಕೆಲಸಕ್ಕ ಹೋಗಾವ್ರು. ಆಕೀಗೆ ಒಬ್ಬ ತಮ್ಮ ಇದ್ದ. ತಾವ ಕೂಲಿ ಕೆಲಸಕ್ಕ ಹೋದ್ರ ತಮ್ಮನ್ನ ನೋಡ್ಕೊಳ್ಳಿಕ್ಕೆ ಅಂತ ಆಕೀನ್ನ ಸಾಲಿ ಬಿಡಿಸಿದ್ರು. ಹುಂ. ಏಳಿನ್ನ. ಯುನಿಫಾರ್ಮ್ ಹಾಕ್ಕೋ. ಸಾಲಿ ಹೊತ್ತ ಆತು. ಲಗುಲಗು ತಾಯಾರ ಆಗು. ನಿನ್ನ ಗೆಳತ್ಯಾರ ಬರಾಕತ್ತಾರ ನೋಡದ.

**ಮೇಘಾ:** (ಶಾಲೆಗೆಂದು ತಯಾರಾಗಲು ಹೊರಟವಳು ಮಧ್ಯದಲ್ಲೇ ನಿಂತು,) ಅವ್ವಾ .. ..

**ಸಂಗೀತಾ:** ಏನ ಮಗಳ?

**ಮೇಘಾ:** ನಾ 8ನೇತ್ತೇಕ್ಕ ಬಂದೆ ಅಂದ್ರ ನಾನೂ ದೂರ ಸಾಲಿಗಿ ಹೋಗ ಬೇಕು. ಆವಾಗ ನಂದೂ ಸಾಲಿ ಬಿಡಸ್ತೀರಿ?

**ಸಂಗೀತಾ:** ಇಲ್ಲವಾ. ಸಾಲಿ ದೂರ ಏನೋ ಐತಿ. ಕಾಲಾನೂ ಛಲೋ ಇಲ್ಲ. ಆದ್ರ ನೀವೆಲ್ಲ ಗುಂಪಿನ್ಯಾಗ ಸಾಲಿಗೆ ಹೋಗ ಬೇಕು. ಸಮಸ್ಯೆ ಆದ್ರ ಎದುರಿಸಲಿಕ್ಕೆ ಕಲೀ ಬೇಕು. ಮನ್ಯಾಗಿನ ಹಿರೇರು, ಊರಾಗಿನ ಪಂಚರು ಯಾರ ಏನ ಹೇಳಿದ್ರೂ ಚಿಂತಿಲ್ಲ. ನಾ ಮಾತ್ರ ನಿನ್ನ ಸಾಲಿ ಬಿಡಸಾಂಗಿಲ್ಲ. ನಿನಗ ಎಷ್ಟ ಬೇಕೋ ಅಷ್ಟ ಕಲಿ. ನೀ ವಕೀಲ ಆಗ್ತೇನಿ ಅಂದೀಯಲ್ಲ. ಖರೇನ ವಕೀಲ ಆಗು. ನಿನ್ನ ಸ್ವಂತ ಕಾಲಮ್ಯಾಲ ನೀ ನಿಲ್ಲಬೇಕು. ನಿನ್ನ ಭವಿಷ್ಯದ ನಿರ್ಧಾರ ನೀನ ತೊಗೋ ಬೇಕು. ನಮ್ಮ ಮನೀ ದೀಪ ನೀನು. ನೀ ಯಾವಾಗಲೂ ಬೆಳಗಿಕೋತನ ಇರಬೇಕು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

# ಬಾಲ ಕಾರ್ಮಿಕರು

ರಾಹುಲ್ ಬಡಿಗೇರ 12 ವರ್ಷದ ಹುಡುಗ. ಮಣ್ಣಿನ ಮೂರ್ತಿಗಳನ್ನು ಮಾಡುವುದೆಂದರೆ ಅಪಾರ ಆಸಕ್ತಿ ಅವನಿಗೆ. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ವಿವಿಧ ಮೂರ್ತಿಗಳನ್ನು ಮಾಡಿಟ್ಟಿದ್ದಾನೆ. ಇವನಿಗೆ ಶಾಲೆಗೆ ಹೋಗುವುದೆಂದರೆ ಬೇಸರ. ಶಾಲೆಯಲ್ಲಿ ಕಲಿಸಿದ್ದು ತಲೆಗೆ ಹತ್ತುತ್ತಿಲ್ಲ. ಪ್ರತಿ ದಿನ ಹೋಗಿ ತಾಟು ಹಾಸಿಕೊಂಡು ಕೂಡ್ರುವುದು ಮಾಸ್ತರ್ರು ಹೇಳಿದ್ದನ್ನು ಬರೆಯುವುದು. ಆ ಲೆಕ್ಕದ ಪಾಠಗಳಂತೂ ಅವನಿಗೆ ಅರ್ಥವೇ ಆಗುವುದಿಲ್ಲ. ಶಾಲೆ ಬಿಟ್ಟ ಮೇಲೆ ಎಲ್ಲರೂ ಅಂಗಳದ ತುಂಬ ಆಟವಾಡಿ ಕೂಗಾಡುತ್ತಿದ್ದರೆ ಇವನು ಮಾತ್ರ ಮೂಲೆಯಲ್ಲಿ ಸುಮ್ಮನೆ ಕುಳಿತಿರುತ್ತಿದ್ದ.

ಗಣೇಶ ಚೌತಿ ಬಂತು. ಊರಿಗೆಲ್ಲ ದೊಡ್ಡ ಹಬ್ಬ. 'ನಮ್ಮನೆಯಲ್ಲಿ ನೀನೇ ಗಣಪತಿ ಮಾಡು' ಅಂದಿದ್ದ ಅಪ್ಪ. ರಾಹುಲ ಬಹಳ ಹುಮ್ಮಸ್ಸಿನಿಂದ ಕೆರೆಯೊಳಗಿನಿಂದ ಗೋಡು ಮಣ್ಣು ತಂದು ಕಲಸಿ ಗಣಪತಿ ಮೂರ್ತಿ ಮಾಡಿದ. ಅವನು ಗಣಪತಿ ಮಾಡುತ್ತಿದ್ದರೆ ಗೆಳೆಯರೆಲ್ಲ ಬಂದು ನೋಡುತ್ತ ಕುಳಿತಿರುತ್ತಿದ್ದರು.

ಊರಿನ ಗೌಡ್ರ ಓಣಿಯಲ್ಲಿ ದೊಡ್ಡ ಗಣಪತಿ. ದೊಡ್ಡ ಪೆಂಡಾಲು. ಜಗಮಗಿಸುವ ಲೈಟುಗಳು. ದೊಡ್ಡದಾಗಿ ಹಾಡು ಹಾಕಿದ್ದಾರೆ. ನೋಡಲು ಹೋದ ರಾಹುಲ. ಅಲ್ಲಿ ಅವನಿಗೆ ಶಂಕರನ ಭೇಟಿ ಆಯಿತು. ಶಂಕರ ಮಹಾರಾಷ್ಟ್ರದಲ್ಲಿ ಗೌಂಡಿ ಕೆಲ್ಸ ಮಾಡುತ್ತಾನಂತೆ. ಅದೇನು ಪೋಷಾಕು.. ಅದೇನು ಬೈಕು ಅವಂದು.. ರಾಹುಲನಿಗೆ ಅವನನ್ನು ನೋಡಿ ಬೆರಗೋ ಬೆರಗು!

'ಗಣಪತಿಗೆ ಮಧ್ಯದಲ್ಲಿ ದೊಡ್ಡ ಮಾಲೆ ಐತಲ್ಲ, ಫಳಾಫಳಾ ಹೊಳೆಯೋದು.. ಅದು ನಾನೇ ತಂದಿದ್ದು. ನಮ್ಮ ಕೊಲ್ಲಾಪುರದಾಗ ಮಾತ್ರ ಸಿಗ್ತಾವೆ ಅಂಥಾ ಮಾಲೆ' ಶಂಕರ ಎದೆಯುಬ್ಬಿಸಿ ಹೇಳುತ್ತಾ ಇದ್ದಾಗ ರಾಹುಲನಿಗೆ ಸ್ವರ್ಗ ನೋಡಿ ಬಂದವನನ್ನು ನೋಡಿದಷ್ಟೇ ಆಶ್ಚರ್ಯದಿಂದ ಕಣ್‌ಕಣ್ ಬಿಟ್ಟು ಬಾಯಿ ತೆಗೆದು ನೋಡ್ತಾ ಇದ್ದ. ರಾಹುಲನನ್ನು ಗಮನಿಸಿದ ಶಂಕರ ಎಡಗೈಯಲ್ಲಿ ಸನ್ನೆ ಮಾಡಿ ಅವನನ್ನು ಕರೆದ, ಅವನ ಹೆಸರು, ಯಾರ ಮನೆ ಎಲ್ಲಾ ಕೇಳಿ ತಿಳಿದುಕೊಂಡ.

ಗಣೇಶ ಚೌತಿ ಮುಗಿಯಿತು. ಅನಂತನ ಚತುರ್ದಶಿಗೆ ದೊಡ್ಡ ಗೌಡ್ರ ಓಣಿಯ ದೊಡ್ಡ ಗಣಪತಿಯನ್ನು ಬೆಂಡ್ ಬಾಜಾದೊಂದಿಗೆ, ಎಲ್ಲಾ ಹುಡುಗರ ಕುಣಿತ, ಕೇಕೆಯೊಂದಿಗೆ ಹೋಗಿ ಕೆರೆಯಲ್ಲಿ ಮುಳುಗಿಸಿ ಬಂದೂ ಆಯ್ತು. ಎಲ್ಲಾದಕ್ಕೂ ಶಂಕರನದೇ ಮುಂದಾಳತ್ವವೆಂಬುದನ್ನು ರಾಹುಲ ಗಮನಿಸಿದ್ದ. ಇಷ್ಟು ದಿನದಲ್ಲಿ ರಾಹುಲನಿಗೆ ಶಂಕರ ಭಾರೀ ದೋಸ್ತನಾಗಿದ್ದ. ಶಾಲೆ ಕಲಿಯಲು ರಾಹುಲನಿಗೆ ಮನಸ್ಸಿಲ್ಲ ಎಂಬುದು ಶಂಕರನಿಗರ್ಥವಾಗಿತ್ತು. ಅವನಂಥಹವರೇ ಇನ್ನೂ ಮೂರು ಹುಡುಗರಿಗೆ ಶಾಲೆ ಇಷ್ಟವಿಲ್ಲ ಎನ್ನುವುದನ್ನು ತಿಳಿದುಕೊಂಡಿದ್ದ. ಈ ಹದಿನೈದು ದಿನಗಳಲ್ಲಿ ಆ ಎಲ್ಲಾ ಹುಡುಗರೂ ಶಂಕರಣ್ಣನ ಪ್ರೀತಿಯ ದೋಸ್ತರಾಗಿಬಿಟ್ಟಿದ್ದರು.

ತಾನೂ ಶಂಕ್ರಣ್ಣನ ಜೋಡಿ ಕೊಲ್ಲಾಪುರಕ್ಕೆ ದುಡಿಯಲು ಹೋಗ್ತೀನಂತ ರಾಹುಲ

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ಹಿಂದಿನ ರಾತ್ರಿಯೇ ಮನೆಯಲ್ಲಿ ಸುದ್ದಿ ತೆಗೆದಿದ್ದ. ಅಪ್ಪ, ಅವ್ವ ಎಲ್ಲರೂ ಬುದ್ದಿ ಹೇಳಿದರು. ಶಾಲೆ ಬಿಡಬಾರದು ಎಂದರು. 'ಆ ಸಾಲ್ಯಾಗೇನೈತಿ ಕಲಿಯಾಕ್ಕ?' ಎಂದು ರಾಹುಲ ಮೂತಿ ಉಬ್ಬಿಸಿದ್ದ. 'ನಾ ಹೋಗಾಂವ ಅಂದ್ರ ಹೋಗಾಂವ' ಎಂದು ತನ್ನ ಅಂಗಿ, ಚಡ್ಡಿಗಳನ್ನೆಲ್ಲ ಚೀಲದಲ್ಲಿ ತುಂಬತೊಡಗಿದ್ದ. 'ಮುಂದಿನ ಸಾರಿ ಬರುವಾಗ ಈ ಚಡ್ಡಿ ಎಲ್ಲಾ ಎಲ್ಲಿರ್ತದೆ, ಹೊಸಾ ಜೀನ್ಸು, ಶಂಕ್ರಣ್ಣನಂಥ ಪಟ್ಟೆ ಪಟ್ಟೆ ಪ್ಯಾಂಟು ಇರ್ತದಿಲ್ಲಿ' ಎಂದು ಕನಸು ಕಾಣುತ್ತ.

ಬೆಳಿಗ್ಗೆ ಎಲ್ಲರೂ ಏಳುವುದರೊಳಗಾಗಿ ರಾಹುಲ ನಾಪತ್ತೆಯಾಗಿದ್ದ. ಅವನಂತೆಯೇ ಇನ್ನೂ ಮೂವರು ಶಾಲೆ ಹುಡುಗರು ಹೋಗಿದ್ದಾರೆಂದು ಎಲ್ಲಾ ಕಡೆ ಸುದ್ದಿಯಾಯಿತು. ಮಕ್ಕಳ ಸಹಾಯವಾಣಿಗೆ ಯಾರೋ ಫೋನು ಮಾಡಿದ್ದರು. ಸಹಾಯವಾಣಿಯವರೂ ಬಂದರು. ಎಲ್ಲಿ ಹೋಗಿರಬಹುದೆಂದು ಸಾಕಷ್ಟು ವಿಚಾರ ಮಾಡಿದರು. ಆದರೆ ಎಷ್ಟು ಪ್ರಯತ್ನ ಮಾಡಿದರೂ ಅವರು ಎಲ್ಲಿದ್ದಾರೆಂದು ಹುಡುಕುವದಾಗಲೀ, ಕರೆದುಕೊಂಡು ಬರುವುದಾಗಲೀ ಆಗಲೇ ಇಲ್ಲ. ಹಕ್ಕಿಗಳು ಗೂಡು ಬಿಟ್ಟು ಹಾರಿ ಹೋಗಿದ್ದವು.

ಶಂಕರನೇ ಎಲ್ಲರನ್ನೂ ಕರೆದುಕೊಂಡು ಹೋಗಿದ್ದಾನೆಂದು ಊರವರಿಗೆಲ್ಲ ಖಾತ್ರಿ ಇದ್ದರೂ ಮನೆಯವರೇ ಕೈಚೆಲ್ಲಿ ಕುಳಿತಿದ್ದರಿಂದ ಯಾರೂ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಮಣ್ಣಿನ ಮೂರ್ತಿಗಳನ್ನು ಸುಂದರವಾಗಿ ಮಾಡುತ್ತಿದ್ದ ರಾಹುಲ ತಾನೇ ಒಂದು ಮಣ್ಣಿನ ಮುದ್ದೆಯಾಗಿ ಕಂಡವರ ಕೈಯಲ್ಲಿ ರೂಪುಗೊಳ್ಳಲು ಒಡ್ಡಿಕೊಂಡು ಹೊರಟೇಹೋಗಿದ್ದ.

ಪ್ರತಿ ವರ್ಷವೂ ರಾಹುಲ ಗಣೇಶ ಚೌತಿ ಮತ್ತು ಸಂಕ್ರಾಂತಿಗೆ ಊರಿಗೆ ಬರುತ್ತಾನೆ. ಬರುವಾಗ ಅಷ್ಟಿಷ್ಟು ದುಡ್ಡು ತರುತ್ತಾನೆ, ತಂದೆ ತಾಯಿಗೆ ಕೊಡುತ್ತಾನೆ. ಆದರೆ ತಮಗೆ ಕೊಟ್ಟಿದ್ದಕ್ಕಿಂತ ಹೆಚ್ಚು ದುಡ್ಡು ಇನ್ನೂ ಅವನ ಕಿಸೆಯಲ್ಲಿದೆ ಎಂದು ಅವರಿಗೆ ಗೊತ್ತು. ಆ ದುಡ್ಡು ಅವನ ಶೋಕಿಗೇ ಸಾಲುವುದಿಲ್ಲ. ಹೋಗುವಾಗ ಮತ್ತೆ ತಂದೆ ತಾಯಿಯೇ ಕೊಟ್ಟು ಕಳಿಸಬೇಕು. ಬಂದಾಗ ಅವನ ಜರ್ಬೇನು, ಜೊಂಪೆ ಕೂದಲನ್ನು ಹಿಂದೆ ಹಾಕಿ ಮಾತಾಡುವ ಗತ್ತೇನು . . ಆ ಪ್ಯಾಂಟೋ . . ಆ ಶರ್ಟೋ .. ಕಪ್ಪು ಕನ್ನಡಕವೋ .. ಕೂಡ್ರುವ, ನಿಲ್ಲುವ ಪರಿಯೇನು ... ಮನೆಯಲ್ಲಿ ಯಾರಿಗೂ ಸೇರಿಕೆ ಬರುವುದಿಲ್ಲ. ಆದರೆ ಯಾರೂ ಮಾತಾಡುವಂತಿಲ್ಲ. ಮುಂದಿನ ಸಾರಿ ಬರುವಾಗ ಬೈಕ್ ತರುತ್ತಾನಂತೆ. ಗಾಳಿಯಲ್ಲಿ ಮಾತು ಹಾರಿಸಿ ಮತ್ತೆ ಗಾಡಿ ಏರುತ್ತಾನೆ. 'ತನ್ನ ಮಗ ರಾಹುಲ ಎಲ್ಲಿ ಕಳೆದುಹೋದ!' ಎಂದು ನೊಂದು ಕಣ್ಣೀರನ್ನು ಒರೆಸಿಕೊಂಡು ಒಳಹೋಗುತ್ತಾಳೆ ಅವರವ್ವ.

ರಾಹುಲನಂಥ ನೂರಾರು ಸಾವಿರಾರು ಮಕ್ಕಳಿಗೆ ಹೊರಗಿನ ಜಗತ್ತು ಜಾಲ ಹಾಕಿದೆ. ಮುಗ್ಧ ಮನಸ್ಸಿಗೆ ಇಲ್ಲದ ಆಮಿಷ ತೋರಿಸಿ ಕಟ್ಟಡ ಕಟ್ಟುವ, ಇಟ್ಟಿಗೆ ಮಾಡುವ, ಡಾಬಾ–ಹೋಟೆಲ್‌ಗಳಲ್ಲಿ ದುಡಿಯುವ ಪ್ಯಾಕಿಂಗ್ ಕೆಲಸ ಮಾಡುವ ಜಾಗಗಳಲ್ಲಿ ಮಕ್ಕಳನ್ನೊಯ್ದು ಇಡುತ್ತಾರೆ. ಅತ್ಯಂತ ಕಡಿಮೆ ಕೂಲಿಗೆ ಹೆಚ್ಚು ಕೆಲಸ ಮಾಡಿಸಬಹುದು, ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಅಸಹಾಯಕರು ಮತ್ತು ಮುಗ್ಧರಾಗಿರುವುದರಿಂದ ಅವರು ಪ್ರಶ್ನೆಗಳನ್ನು ಕೇಳುವುದಿಲ್ಲ, ಮುಷ್ಕರ ಹೂಡುವುದಿಲ್ಲ, ಸಂಘಟಿತರಾಗುವುದಿಲ್ಲ, ತಕರಾರು ಚೌಕಾಶಿ ಮಾಡುವುದಿಲ್ಲ ಎಂದು ದುಡಿಯುವ ಮಕ್ಕಳಿಗೆ ಬೇಡಿಕೆ ಬಹಳ. ಜಗತ್ತಿನಾದ್ಯಂತ ಇಂದು

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

16.8 ಕೋಟಿ ಮಕ್ಕಳು ಶಾಲೆ ಬಿಟ್ಟು, ಮನೆ ಬಿಟ್ಟು ದುಡಿಯುವ ಕ್ಷೇತ್ರವನ್ನು ಸೇರಿಕೊಂಡಿದ್ದಾರೆ.

ವಿಶ್ವಾದ್ಯಂತ 70% ಬಾಲಕಾರ್ಮಿಕರು ಕೃಷಿಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಸಾವುನೋವಿನ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡರೆ ಗಣಿ, ಕಟ್ಟಡ ನಿರ್ಮಾಣ, ಕೃಷಿ ಈ ಮೂರೂ ಅತಿ ಅಪಾಯಕಾರಿ ಉದ್ಯೋಗಗಳು. ಅದರಲ್ಲೂ ಮಕ್ಕಳಿಗೆ ತುಂಬ ಅಪಾಯಕಾರಿಯಾದವು. ಆದರೆ ಈ ಮೂರೂ ಕ್ಷೇತ್ರಗಳಲ್ಲಿ ಅನಧಿಕೃತವಾಗಿ ಕೋಟ್ಯಂತರ ಮಕ್ಕಳು ದುಡಿಯುತ್ತಿರುವ ಕಟುವಾಸ್ತವ ನಮ್ಮ ಮುಂದಿದೆ. ಅಷ್ಟೇ ಅಲ್ಲ; ಪಟಾಕಿ, ರೇಷ್ಮೆ, ಬೆಂಕಿಪೊಟ್ಟಣ, ಗಾಜು ತಯಾರಿಕೆ, ಬಳೆ, ಬೀಗ, ಸ್ಲೇಟ್, ಜರಿ, ಹರಳು ಮತ್ತು ವಜ್ರಸಾಣೆ ಉದ್ಯಮಗಳಲ್ಲಿ ಮಕ್ಕಳನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ಮನೆ ಕೆಲಸ, ರಸ್ತೆಬದಿ ಮಾರಾಟ, ಹೋಟೆಲ್ ಇನ್ನಿತರ ಉದ್ಯೋಗವಲ್ಲದ ಉದ್ಯೋಗಗಳಲ್ಲಿ ಕೂಡಾ ಮಕ್ಕಳು ದುಡಿಯುತ್ತಿದ್ದಾರೆ.

ಪ್ರಪಂಚದ ಒಟ್ಟೂ ಬಾಲಕಾರ್ಮಿಕರಲ್ಲಿ ಅರ್ಧದಷ್ಟು ಜನ ಭಾರತದಲ್ಲಿದ್ದಾರೆ ಎಂದು ಹೇಳಲಾಗುತ್ತದೆ. ಶಿಕ್ಷಣದ ಹಕ್ಕಿನ ಕಾಯಿದೆಯನ್ವಯ 6–14 ವರ್ಷದೊಳಗಿನ ಮಕ್ಕಳಿಗೆ ಶಾಲೆಯಲ್ಲಿರುವುದು ಕಡ್ಡಾಯ. ಆದರೆ 2014 ರ ರಾಷ್ಟ್ರೀಯ ಮಾದರಿ ಸಮೀಕ್ಷೆಯ ಪ್ರಕಾರ, ಗ್ರಾಮೀಣ ಭಾಗದಲ್ಲಿ 5–14 ವರ್ಷದೊಳಗಿನ ಪ್ರತಿ 1000 ಮಕ್ಕಳಿಗೆ 30 ಮಕ್ಕಳು ಮತ್ತು ಶಹರ ಪ್ರದೇಶದಲ್ಲಿ 1000 ಮಕ್ಕಳಿಗೆ 6 ಮಕ್ಕಳು ಬಾಲ ಕಾರ್ಮಿಕರಾಗುತ್ತಿದ್ದಾರೆ. ಕರ್ನಾಟಕದಲ್ಲಿ ಮಾನವ ಸಂಪನ್ಮೂಲ ಸಂಪನ್ಮೂಲ ಸಚಿವಾಲಯ ನಡೆಸಿದ ಸಮೀಕ್ಷೆಯ ಪ್ರಕಾರ, 2005 ರಲ್ಲಿ 1.34 ಕೋಟಿ ಮಕ್ಕಳು, 2009 ರಲ್ಲಿ 81.5 ಮಕ್ಕಳು, 2014ರಲ್ಲಿ 60.6 ಮಕ್ಕಳು ದುಡಿಮೆಗಾಗಿ ಶಾಲೆ ಬಿಟ್ಟಿದ್ದಾರೆ.

ಬಡತನ ಇರುವಷ್ಟು ದಿನ ಇಂಥ ಸಮಸ್ಯೆಗಳೂ ಮುಂದುವರೆಯುತ್ತವೆ. ಬಾಲಕಾರ್ಮಿಕರ ಸಮಸ್ಯೆ ಕಾನೂನಿನ ಸಮಸ್ಯೆ ಅಲ್ಲ. ರಾಜಕೀಯ ಸಮಸ್ಯೆಯೂ ಅಲ್ಲ. ಇದು ಸಾಮಾಜಿಕ ಸಮಸ್ಯೆ. ಹಾಗಾಗಿಯೇ ಹಲವು ಆಯಾಮಗಳನ್ನೊಳಗೊಂಡಿರುವಂಥದು. ಹಣಕ್ಕಾಗಿ ಮಕ್ಕಳ ಬಳಿ ಕೆಲಸ ಮಾಡಿಸುವುದನ್ನು ಕಾನೂನು ನಿಷೇಧಿಸುತ್ತದೆ. ಕಾನೂನಿನ ಪ್ರಕಾರ ತಮ್ಮ ಅಥವಾ ತಮ್ಮ ಕುಟುಂಬದ ನಿರ್ವಹಣೆಗಾಗಿ ಎಳೆ ವಯಸ್ಸಿನಲ್ಲೇ ಅಪಾಯಕಾರಿ ಉದ್ಯೋಗಗಳನ್ನು ಮಾಡುವ 15 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವರು ಬಾಲಕಾರ್ಮಿಕರು ಎನಿಸಿಕೊಳ್ಳುತ್ತಾರೆ. ಇದು ಸಮಸ್ಯೆ ಏಕೆಂದರೆ ದುಡಿಯುವ ಮಕ್ಕಳು ಬಾಲ್ಯದ ಹಕ್ಕು, ವಿದ್ಯಾಭ್ಯಾಸ, ಸವಲತ್ತುಗಳಿಂದ ವಂಚಿತರಾಗುತ್ತಾರೆ.

ಎಚ್. ಪಿ. ಬ್ಲಾವಟ್‌ಸ್ಕಿ 'ಮನುಕುಲ ಮಕ್ಕಳಲ್ಲೇ ಮುಕ್ತಿ ಪಡೆಯಬೇಕು' ಎನ್ನುತ್ತಾರೆ. 'ಮಕ್ಕಳನ್ನು ಪ್ರೀತಿಸುವುದೆಂದರೆ ದೇವರನ್ನು ಪ್ರೀತಿಸಿದಂತೆ' ಎಂದರು ಥೆರೇಸಾ. ಹಾಗಾಗಿ ನಾವು ಪ್ರತಿ ಮಗುವಿನ ಹಕ್ಕುಗಳನ್ನು ರಕ್ಷಿಸಲು, ಅವರ ಬಾಲ್ಯವನ್ನು ಅರ್ಥಪೂರ್ಣಗೊಳಿಸಲು ಕೈಜೋಡಿಸೋಣ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

# ಬಾಲ್ಯ ವಿವಾಹ

ಎಳೆಗರುವನ್ನು ಬಂಡಿಗೆ ಬಿಗಿದು
ಎಳೆಯೆಂದರೆ ಅದು ಎಳೆಯುವುದೇನು
ದೇಹ–ಮನಸ್ಸು ಬಲಿಯುವ ಮೊದಲೇ
ಕೂರಿಸಬೇಡಿ ಹಸೆಮಣೆ–ಮೇಲೆ

ಬಾಲ್ಯ ವಿವಾಹ, ಸಂಬಂಧದಲ್ಲಿ ವಿವಾಹ ಹಾಗೂ ವಿಧವಾ ಪದ್ಧತಿ ಇವು ಮೂರೂ ಭಾರತೀಯ ವಿವಾಹ ವ್ಯವಸ್ಥೆಯ ಮುಖ್ಯ ಆಚರಣೆಗಳು. ಅವು ಮಹಿಳೆಗೆ ಆಯ್ಕೆಯ ಮುಕ್ತ ಅವಕಾಶ ನೀಡದೇ, ಹೆಣ್ಣೆಂದರೆ 'ಒಪ್ಪಿಗೆ'ಯೆಂದು ತಲೆ ಅಲ್ಲಾಡಿಸಬೇಕಾದವಳು ಎಂದೇ ಭಾವಿಸಿವೆ. ಈಶ್ವರಚಂದ್ರ ವಿದ್ಯಾಸಾಗರ, ಬೆಹ್ರಾಮ್ ಮಲಬಾರಿಯಂಥವರ ಪ್ರಯತ್ನದಿಂದ ಬಾಲ್ಯವಿವಾಹ ನಿಷೇಧ ಕಾನೂನು 1930ರಲ್ಲಿ ಜಾರಿಯಾದರೂ 21ನೇ ಶತಮಾನದ ತನಕ ಬಾಲ್ಯವಿವಾಹ ಪದ್ಧತಿ ಮುಂದುವರೆದಿದೆ. ಮನೆತನದ ಮರ್ಯಾದೆ ಹುಡುಗಿಯರ ಕೈಲಿದೆ ಎಂದು ಭಾವಿಸಿ ಹುಡುಗಿಯರು ಹೊರಜಗತ್ತಿಗೆ ಕಣ್ಣುಬಿಟ್ಟು ತನ್ನನ್ನು ತಾನು ಅರ್ಥ ಮಾಡಿಕೊಳ್ಳುವಷ್ಟರಲ್ಲಿ ಮದುವೆ ಮಾಡುತ್ತಾರೆ. ಜಾತ್ರೆ, ಉತ್ಸವಗಳಲ್ಲಿ ನಡೆಯುವ ಸಾಮೂಹಿಕ ವಿವಾಹಗಳಲ್ಲಿ 10%ಕ್ಕಿಂತ ಹೆಚ್ಚು ಬಾಲ್ಯವಿವಾಹವೇ ಆಗಿವೆ. ಬಾಲ್ಯವಿವಾಹ ತಪ್ಪೆಂಬ ಭಾವವೇ ಇಲ್ಲದಿರುವುದರಿಂದ ಸಮಸ್ಯೆ ಇನ್ನಷ್ಟು ಉಲ್ಬಣಗೊಂಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಬಾಲ್ಯ ವಿವಾಹ ತಡೆಗೆ ಸರ್ಕಾರ ಕಾನೂನು ಮಾಡಿದೆ. ಸರ್ಕಾರೇತರ ಸಂಘಸಂಸ್ಥೆಗಳು ಕೈಜೋಡಿಸಿವೆ. ಆದರೂ ಈಗಲೂ ಐವರಲ್ಲಿ ಇಬ್ಬರು ಹುಡುಗಿಯರು 18 ವರ್ಷದೊಳಗೇ ಮದುವೆ ಆಗಿರುತ್ತಾರೆಂಬ ಅಂಶ ದಿಗಿಲುಗೊಳಿಸುತ್ತದೆ. ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಹುಡುಗಿಯ ವಯಸ್ಸು 18 ವರ್ಷಕ್ಕಿಂತ ಕಡಿಮೆ ಹಾಗೂ ಹುಡುಗನ ವಯಸ್ಸು21 ವರ್ಷಕ್ಕಿಂತ ಕಡಿಮೆ ಇದ್ದಲ್ಲಿ ಅವರನ್ನು ಅಪ್ರಾಪ್ತ ವಯಸ್ಕರೆಂದು ಪರಿಗಣಿಸುತ್ತದೆ.ಆದರೆ ಕರ್ನಾಟಕದಲ್ಲಿ ಹೆಚ್ಚುಕಡಿಮೆ 40% ಮದುವೆಗಳಲ್ಲಿ ಹುಡುಗಿ ಅಪ್ರಾಪ್ತ ವಯಸ್ಕಳಾಗಿರುತ್ತಾಳೆ.

ಅಂತಾರಾಷ್ಟ್ರೀಯ ಮಹಿಳಾ ಸಂಶೋಧನಾ ಸಂಸ್ಥೆಯ ಪ್ರಕಾರ 18 ವರ್ಷದೊಳಗೆ ಹೆಣ್ಣುಮಕ್ಕಳು ಮದುವೆಯಾಗುವ ವಿಶ್ವದ ಮೊದಲ 20 ರಾಷ್ಟ್ರಗಳ ಪೈಕಿ ಭಾರತ 11ನೇ ಸ್ಥಾನದಲ್ಲಿದೆ. ರಾಜಸ್ಥಾನದಲ್ಲಿ ಮೊದಲ ಹೆರಿಗೆಯ ವೇಳೆ ತಾಯಿಯ ಸರಾಸರಿ ವಯಸ್ಸು 16.3 ವರ್ಷ! ಬಾಲ್ಯವಿವಾಹ ತಡೆಯಲು ಹೋದ ಸಾಥಿನ್ ಕಾರ್ಯಕರ್ತೆ ಭಾಂವ್ರಿದೇವಿಯವರ ಮೇಲೆ ಗುಂಪು ಅತ್ಯಾಚಾರ ನಡೆಸಲಾಗಿತ್ತು. 2009ರ ಕರ್ನಾಟಕ ಮಕ್ಕಳ ಹಕ್ಕು ಸಮೀಕ್ಷಾ ವರದಿಯ ಪ್ರಕಾರ ಉತ್ತರ ಕರ್ನಾಟಕದಲ್ಲಿ ಬಾಲ್ಯ ವಿವಾಹ ಹೆಚ್ಚಾಗಿ ಕಂಡುಬರುತ್ತದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆಯ ಪ್ರಕಾರ ಈಗಲೂ ಕರ್ನಾಟಕದ ಶೇ. 21 ಮದುವೆಗಳು ಬಾಲ್ಯವಿವಾಹಗಳಾಗಿವೆ. ಗರ್ಭಿಣಿಯರಲ್ಲಿ 8% ಜನ 15–19 ವರ್ಷ ವಯಸ್ಸಿನ ಒಳಗಿನವರಾಗಿದ್ದಾರೆ.

Edited with the trial version of Foxit Advanced PDF Editor
To remove this notice, visit: www.foxitsoftware.com/shopping

**ಯಾಕೆ ಕೂಡದು?**

- ದೈಹಿಕ, ಮಾನಸಿಕ ಬೆಳವಣಿಗೆಯಾಗುವ ಮೊದಲು ಮದುವೆ, ತಾಯ್ತನ ಆ ಹೆಣ್ಣಿನ ಆರೋಗ್ಯಕ್ಕೆ ಮುಳುವು.
- ಅದು ಬಾಲ್ಯದ ಹಕ್ಕುಗಳನ್ನು, ಹೆಣ್ಣಿನ ಆಯ್ಕೆಯ ಅವಕಾಶವನ್ನು, ಮಕ್ಕಳ ಹಕ್ಕುಗಳನ್ನು ಕಸಿಯುತ್ತದೆ.
- ಎಳೆವಯಸ್ಸಿನ ತಾಯ್ತನವು ತಾಯಿ–ಮಗುವಿಗೆ ಆರೋಗ್ಯದ ಸಮಸ್ಯೆಗಳನ್ನು ಸೃಷ್ಟಿಸುತ್ತದೆ.
- ಶಿಕ್ಷಣ, ಉದ್ಯೋಗಾವಕಾಶಗಳಿಂದಲೂಆ ಹೆಣ್ಣು ಮಕ್ಕಳು ವಂಚಿತರಾಗುತ್ತಾರೆ.

ಭಾರತದ ಬಹುಪಾಲು ಕಾಯ್ದೆ ಕಾನೂನುಗಳು ಮಹಿಳಾ ಪರವಾಗಿಯೇ ಇದ್ದರೂ, ಸಮಾಜವು ವಿವಾಹದ ವಿಷಯದಲ್ಲಿ ಇನ್ನೂ ಉದಾರವಾಗಿ ಚಿಂತಿಸಬೇಕಾಗಿದೆ. ಇಲ್ಲವಾದಲ್ಲಿ ಕಾನೂನಾತ್ಮಕ ಪ್ರಯತ್ನಗಳೆಲ್ಲ ಕಾಗದದ ಹುಲಿಗಳಾಗಿಯೇ ಉಳಿಯುತ್ತವೆ.

ಇಷ್ಟು ಬೇಗ ಮದುವೆ ಯಾಕವ್ವಾ?
ಈ ಪುಟ್ಟ ಹುಡುಗಿಗೆ/ಸೀರೆ ಯಾಕೆ? ಲಂಗ ಸಾಕವ್ವ
ಇವಳಿಗೆ ಲಂಗ ಹಾಕವ್ವ //ಪ//
ಗೆಳತಿಯರೊಂದಿಗೆ ಕೂಡಿಕೊಂಡು
ಕುಂಟಾಬಿಲ್ಲೆ ಆಡಿಕೊಂಡು
ಕದ್ದು ತಿನ್ನುವಳು ಸೀಬೆಕಾಯಿ
ಹಣ್ಣಾಗಿಲ್ಲ ಇನ್ನೂ ಕಾಯಿ //ಇಷ್ಟು ಬೇಗ//
ಕಲಿಯುವ ವಯಸ್ಸು ನಲಿಯುವ ವಯಸ್ಸು
ಮನಸಿನ ತುಂಬಾ ಬಣ್ಣದ ಕನಸು
ತಂದೆ ತಾಯಿಗಳ ಒತ್ತಾಯಕ್ಕೆ
ಬಾಲ್ಯವನೀಕೆ ಬಲಿಕೊಡಬೇಕೆ? //ಇಷ್ಟು ಬೇಗ//
ಎಳೆಗರುವನ್ನು ಬಂಡಿಗೆ ಬಿಗಿದು
ಎಳೆಯೆಂದರೆ ಅದು ಎಳೆಯುವುದೇನು?
ದೇಹ ಮನಸ್ಸು ಬಲಿಯುವ ಮೊದಲೆ
ಕೂರಿಸಬೇಡಿ ಹಸೆಮಣೆ ಮೇಲೆ//ಇಷ್ಟು ಬೇಗ// (ಎಚ್. ದುಂಡಿರಾಜ್)

## ಗುಜ್ಜರ ಮದುವೆ

### ಇದು ಮದುವೆಯಲ್ಲ, ಹೆಣ್ಣುಮಕ್ಕಳ ಮಾರಾಟ

ರೇಖಾ ನಾಳೆಯಿಂದ ಶಾಲೆಗೆ ಬರುವುದಿಲ್ಲ ಎಂದು ಅವಳ ಕ್ಲಾಸಿನ ಹುಡುಗಿಯರು ಗುಸು ಗುಸು ಮಾತಾಡಿಕೊಳ್ಳುತ್ತಿದ್ದರು. ಅವಳೋ, ನಾಚಿಕೆಯಿಂದಲೋ, ದುಃಖದಿಂದಲೋ ಮಾತಾಡಲಾಗದೆ ಮುಖ ದುಮ್ಮಿಸಿಕೊಂಡು ಕುಳಿತಿದ್ದಳು.ಕ್ಲಾಸ್ ಟೀಚರಿಗೆ ಅನುಮಾನ ಬಂದು ಹುಡುಗಿಯರನ್ನೆಲ್ಲ ಒತ್ತಟ್ಟಿಗೆ ಕರೆದರು, ಏನಾಯಿತು ಹೇಳಿ ಎಂದರು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

'ಆಕೀಗ ಗುಜ್ಜರಕ್ಕೆ ಕೊಟ್ಟಾರ್ರೀ ಟೀಚರ. ಇನ್ಮ್ಯಾಲ ಆಕಿ ಸಾಲೀಗ ಬರಂಗಿಲ್ಲ.' ಪ್ರೇಮಾ ಬಾಯ್ಬಿಟ್ಟಳು. 'ಹಂಗಂದರೇನು?' ಟೀಚರಿಗೆ ಗುಜ್ಜರ ಮದುವೆಯ ಬಗ್ಗೆ ಗೊತ್ತೇ ಇಲ್ಲ.

'ಕೊಲ್ಲಾಪೂರ್ ಕಡಿಂದ ಕೇಳ್ಕೊಂಡು ಬರ್ತಾರ್ರೀ. ಇಲ್ಲಿ ಮದ್ವಿ ಆಗಂಗಿಲ್ರೀ. ಕರ್ಕೊಂಡು ಹೋಗಿ ಬಿಡ್ತಾರ. ಅವ್ರೇ ಎಲ್ಲಾ ಮಾಡ್ಕೋತಾರ್ರೀ' ಟೀಚರ್ ಇನ್ನೂ ಘಾಬರಿ. ಅದೆಂತಹ ಮದುವೆ ಇದು? ಮನೆ ಮುಂದೆ ಚಪ್ಪರವಿಲ್ಲ, ಹಾಡಿಲ್ಲ, ಹಸೆ ಇಲ್ಲ, ಮಾತಿಲ್ಲ, ಕತೆ ಇಲ್ಲ ಎಂಥಾ ಮದುವೆ ಇದು? ಹಿಂತಿರುಗಿ ಬಂದು ಉಳಿದ ಶಿಕ್ಷಕರ ಜೊತೆ ಮಾತಾಡಿದಾಗ ಗುಜ್ಜರ ಮದುವೆಯ ಕತೆ ಅವರಿಗೆ ಗೊತ್ತಾಯಿತು.

ಎಲ್ಲಿಂದಲೋ ಬರುವವರು ಗಂಡಿನ ಕಡೆಯವರು. ಎಲ್ಲಿಂದಲೋ ಅಂದರೆ ಆ ಕಡೆ, ಬೆಳಗಾವಿ ದಾಟಿ ಕೊಲ್ಲಾಪುರ ಮಹಾರಾಷ್ಟ್ರ, ಇನ್ನೂ ದೂರದ ದೇಶದಿಂದ ಬರುತ್ತಾರೆ. ಹುಡುಗ ಹುಡುಗಿಯ ಭೇಟಿ ಇಲ್ಲ. ಯಾರೋ ಬಂದು ಗುಟ್ಟಿನಲ್ಲಿ ಮಾತಾಡಿ ಹೋಗುತ್ತಾರೆ. ಒಪ್ಪಿದಂತೆ ಒಂದು ಸಂಜೆ ಕತ್ತಲಾದ ಮೇಲೆ ಹುಡುಗಿ ಹೊರಗಡೆ ಹೋಗಬೇಕು, ಅವರು ಕಾರಲ್ಲಿ ಕರೆದೊಯ್ಯುತ್ತಾರೆ. ವಿಷಯ ತಿಳಿದ ಆ ಟೀಚರ್ ಮೈ ನಡುಗಿ ಹೋಯಿತು.ಎದೆಂಥಾ ಮದುವೆ? ರಾತ್ರೋರಾತ್ರಿ ಕತ್ತಲಲ್ಲಿ ಬಂದು ಹುಡುಗಿಯನ್ನು ಹಾರಿಸಿಕೊಂಡು ಹೋಗುವ ಮದುವೆ? ಇದಕ್ಕೆ ಮದುವೆ ಎನ್ನುತ್ತಾರೆಯೇ? ಇನ್ನೂ ವಿಚಾರಿಸಲಾಗಿ ಇತ್ತೀಚೆಗೆ ಸ್ವಲ್ಪ ಕಡಿಮೆಯಾಗಿದ್ದರೂ ಧಾರವಾಡದ ಸುತ್ತಮುತ್ತಲ ಹಳ್ಳಿಗಳಲ್ಲಿ ತೀರಾ ಇತ್ತೀಚಿನವರೆಗೂ ವ್ಯಾಪಕವಾಗಿದ್ದ ಒಂದು ಮಾದರಿಯ ಮದುವೆ ಇದು ಎಂದು ಗೊತ್ತಾಯಿತು.

ಹೆಣ್ಣು ಹುಟ್ಟಿದಾಗಿನಿಂದ ತಂದೆ ತಾಯಿಗಳು ಮದುವೆಯ ಖರ್ಚಿನ ಬಗ್ಗೆ ಚಿಂತಿಸುತ್ತಿರುತ್ತಾರೆ. ಮದುವೆಗೆ ಹೇಗೆ ದುಡ್ಡು ಹೊಂದಿಸಬೇಕು, ಎಲ್ಲೆಲ್ಲಿ ಸಾಲ ಮಾಡಬೇಕು ಎಂದು. ಅದರಲ್ಲೂ ಅನಕ್ಷರಸ್ಥರು, ಬಡವರು, ಹೆಚ್ಚು ಹೆಣ್ಣುಮಕ್ಕಳಿರುವವರು ಚಿಂತೆಯಿಂದ ತಲೆ ಕೆಡಿಸಿಕೊಂಡಿರುತ್ತಾರೆ.

'ವರದಕ್ಷಿಣೆ ಇಲ್ಲದೆ ಮದ್ವೆ ಮಾಡ್ಕೋತಾರಂತೆ. ಅಷ್ಟೇ ಏನು, ನಿಮಗೇ ದುಡ್ಡು ಕೊಡ್ತಾರಂತೆ.' ಹೀಗೆ ಸುದ್ದಿ ಬಂದು ಕಿವಿಗೆ ಬಿದ್ದಾಗ ಅಂಥ ತಂದೆಗೆ ಕಿವಿಯ ಮೇಲೆ ಹೂ ಬಿದ್ದಷ್ಟು ಸಂತೋಷ. ವರದಕ್ಷಿಣೆ ಇಲ್ಲ, ಮದುವೆ ಖರ್ಚಿಲ್ಲ ಯಾರಿಗುಂಟು ಯಾರಿಗಿಲ್ಲ ಎನ್ನುತ್ತ ಸುದ್ದಿ ತಂದವನ ಹಿಂದೆ ಹೊರಡುತ್ತಾರೆ. ಮಗಳನ್ನು ಖರ್ಚು ಮಾಡುವುದೊಂದೇ ಗುರಿಯಾಗುಳ್ಳ ಅವರ ಮೇಲೆ ಭಾಷೆ ಬಾರದ ಬೇರೆ ರಾಜ್ಯದ ಮಂದಿ ಇಲ್ಲಿನವರೊಬ್ಬರನ್ನಿಟ್ಟುಕೊಂಡು ಬಲೆ ಬೀಸುತ್ತಾರೆ. ನಿಮ್ಮ ಮಗಳು ಅತ್ಯಂತ ಸುಖವಾಗಿರುತ್ತಾಳೆ, ಮನೆಯಲ್ಲಿ ಬೇಕಾದಷ್ಟು ಆಳು ಕಾಳುಗಳು. ರಾಣಿಯ ಹಾಗೆ ಬದುಕುತ್ತಾಳೆ ಎಂದೆಲ್ಲ ಬಣ್ಣದ ಮಾತಾಡುತ್ತಾರೆ. ಬಲೆಗೆ ಬಿದ್ದ ತಂದೆ ಮನೆಗೆ ಬಂದು ಹೆಂಡತಿಯನ್ನೂ ಮಗಳನ್ನೂ ಒಪ್ಪಿಸಿ ಹಣದ ವ್ಯವಹಾರ ಮುಗಿಸುತ್ತಾರೆ. ಸಂಜೆ ಕತ್ತಲಾದ ಮೇಲೆ ಊರ ಹೊರಗೆ ಕಾರೊಂದು ಬರುತ್ತದೆ, ಹುಡುಗಿ ಮರುದಿನದಿಂದ ಕಾಣದಾಗುತ್ತಾಳೆ. ಇದಕ್ಕೆ ಗುಜ್ಜರ ಮದುವೆ ಎನ್ನುತ್ತಾರೆ.

ಇಷ್ಟು ತಿಳಿದ ಮೇಲೆ ಟೀಚರರಿಗೆ ಸುಮ್ಮನೆ ಕೂಡ್ರಲು ಸಾಧ್ಯವಾಗಲೇ ಇಲ್ಲ. ಹುಡುಗಿಯರ ಜೊತೆಗೆ ಅವರ ಮನೆಗೇ ಹೋಗಿ ತಾಯಿಯ ಜೊತೆ ಮಾತನಾಡಿ, ಇಷ್ಟು ಗುಟ್ಟಿನಲ್ಲಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ನಡೆಯುವ ಮದುವೆ ಖಂಡಿತವಾಗಿಯೂ ಮದುವೆಯಲ್ಲ, ಇಂಥ ಸಂಬಂಧಕ್ಕೆ ಮಗಳನ್ನು ಬಲಿ ಮಾಡಬೇಡಿ ಎಂದು ಮನವೊಲಿಸಿದರು. ತಮಗೆ ತಿಳಿದ ಸಂಸ್ಥೆಯೊಂದಕ್ಕೆ ಸುದ್ದಿ ತಿಳಿಸಿ ಹುಡುಗಿಯನ್ನು ಒಯ್ಯಲು ಬರುತ್ತಿದ್ದವರನ್ನು ಹಿಡಿಸಿ ಹಾಕಿದರು. ಒಬ್ಬರನ್ನು ಹಿಡಿದಾಗ ಇಡೀ ಹೆಣ್ಣು ಮಾರಾಟ ಜಾಲದ ಎಳೆ ಎಳೆಯೂ ಸಿಕ್ಕಿತು. ಎಲ್ಲರನ್ನೂ ಪೊಲೀಸರು ಹಿಡಿದು ಜೈಲಿಗಟ್ಟಿದರು.

ಇದು ಕೆಲ ವರ್ಷಗಳ ಹಿಂದೆ ಕಲಘಟಗಿಯ ಸುತ್ತಮುತ್ತ ನಡೆದ ಘಟನೆಯ ಸುದ್ದಿ. ಇಂಥ ಗುಟ್ಟಿನ ಮದುವೆಗಳು ಇಂದಿಗೂ ಆಗುತ್ತಿರುತ್ತವೆ. ಎಷ್ಟು ಎಚ್ಚರ ವಹಿಸಿದರೂ ಒಂದಲ್ಲಾ ಒಂದು ಕುಟುಂಬದ ಹೆಣ್ಣು ಹುಡುಗಿಯರು ಗುಜ್ಜರ ಮದುವೆಯ ಜಾಲಕ್ಕೆ ಬೀಳುತ್ತಿರುತ್ತಾರೆ.

ರಾಜಸ್ಥಾನದ ಒಂದು ಸಮುದಾಯದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಅತಿ ಕಡಿಮೆಯಾಗಿ (ಅದಕ್ಕೆ ಕಾರಣ ಗರ್ಭದಲ್ಲಿರುವಾಗಲೇ ಪರೀಕ್ಷೆ ಮಾಡಿಸಿ ಅದು ಹೆಣ್ಣೆಂದು ಗೊತ್ತಾಗುತ್ತಲೇ ಹೆಣ್ಣು ಭ್ರೂಣ ಹತ್ಯೆ ಮಾಡಿಸಿದ್ದು) ಇಂದು ಮದುವೆಯಾಗುವ ಗಂಡಿಗೆ ಹೆಣ್ಣಿಲ್ಲವಾಗಿ ದೂರದ ರಾಜಸ್ಥಾನದಿಂದ ಹೆಣ್ಣು ಹುಡುಕಿಕೊಂಡು ಬೆಳಗಾವಿ, ಧಾರವಾಡಕ್ಕೆ ಬರುವ ಕೆಲ ಸಿರಿವಂತ ಜನರಿಗೆ ಇಲ್ಲಿನ ಮದುವೆ ದಳ್ಳಾಳಿಗಳು ಹೆಣ್ಣುಗಳನ್ನು ತೋರಿಸುತ್ತಾರೆ. ಬಡ ಹೆಣ್ಣುಮಕ್ಕಳ ತಂದೆ–ತಾಯಿಗಳ ಪರಿಚಯ ಮೊದಲೇ ಮಾಡಿಕೊಂಡಿರುವ ದಳ್ಳಾಳಿಗಳು ರಾಜಸ್ಥಾನದಿಂದ ಜನ ಬಂದಿಳಿದ ಒಂದೆರಡು ಗಂಟೆಗಳಲ್ಲೇ, ಬಸ್ ಸ್ಟ್ಯಾಂಡಿನಲ್ಲೋ ದೇವಸ್ಥಾನಗಳಲ್ಲೋ ಸಂಬಂಧ ಕುದುರಿಸಿಕೊಡುತ್ತಾರೆ. ಅದೇ ಬರುತ್ತ ಬರುತ್ತ ಒಂದು ದಂಧೆಯಾಗಿ, ಇಂದು ಬಲು ದೊಡ್ಡ ಹೆಣ್ಣುಮಕ್ಕಳ ಮಾರಾಟಜಾಲವಾಗಿ ಬೆಳೆದುಬಿಟ್ಟಿದೆ. ಗುಜ್ಜರಕ್ಕೆ ಮದುವೆಯಾಗಿ ಹೋದವರು ಪದೇ ಪದೇ ಊರಿಗೆ ಬರುವುದಿಲ್ಲ. ಬಂದರೆ ಅವಳ ಜೊತೆ ಇನ್ನೊಬ್ಬ ಇದ್ದು ಅವಳನ್ನು ಸದಾ ಕಾಯುತ್ತಿರುತ್ತಾನೆ. ಮೈತುಂಬ ಬಂಗಾರ ಹೇರಿಕೊಂಡು ಬಂದಿಳಿಯುವ ಆಕೆ ಇನ್ನಷ್ಟು ಹೆಣ್ಣುಮಕ್ಕಳಿಗೆ ಜಾಲ ಬೀಸುತ್ತಿರುತ್ತಾಳೆ. ಎಲ್ಲೆಲ್ಲಿ ಬಡ ಹುಡುಗಿಯರು ಇದ್ದಾರೆ ನೋಡುತ್ತಿರುತ್ತಾಳೆ. ಮುಗ್ಧ ತಾಯ್ತಂದೆಯರು ಬಲೆಗೆ ಬೀಳುತ್ತಾರೆ. ದುಡ್ಡಿನಾಸೆಗೆ ಮನೆ ಮಗಳನ್ನೇ ಕಳೆದುಕೊಳ್ಳುತ್ತಾರೆ. ಮಗಳನ್ನು ಗೊತ್ತಿಲ್ಲದ ನರಕಕ್ಕೆ ದೂಡುತ್ತಾರೆ.

- ಗುಜ್ಜರ ಮದುವೆ ಮದುವೆಯಲ್ಲ. ಹೆಣ್ಣುಮಕ್ಕಳ ಮಾರಾಟ ಜಾಲ.
- ಇಲ್ಲಿಯ ಹೆಣ್ಣು ಮಕ್ಕಳನ್ನು ಅಲ್ಲಿನ ಉಳ್ಳವರ ಮನೆಗಳಿಗೆ ಮನೆಗೆಲಸಕ್ಕಾಗಿ ಗುಲಾಮಳಂತೆ ಮಾರಲಾಗುತ್ತದೆ.
- ವೇಶ್ಯಾವಾಟಿಕೆಗಳಿಗೂ ದೂಡಲಾಗುತ್ತದೆ.
- ಒಂದು ಮನೆಯ ಐದಾರು ಗಂಡುಮಕ್ಕಳು ಇಲ್ಲಿಯ ಒಬ್ಬಳೇ ಹುಡುಗಿಯನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಾರೆ.
- ಹಣ ಕೊಟ್ಟು ಕೊಂಡವರು ಹೇಳಿದ ಹಾಗೆ ಕೇಳದಿದ್ದರೆ, ಹೊಡಿದು ಬಡಿದು ಹಿಂಸಿಸಲಾಗುತ್ತದೆ.
- ಕೆಲ ಹೆಣ್ಣುಮಕ್ಕಳನ್ನು ಕೈಕಾಲು ಮುರಿದು, ಕಣ್ಣುಗಳ ಕಿತ್ತು ಭಿಕ್ಷಾಟನೆಗೂ ಹಚ್ಚಲಾಗುತ್ತಿತ್ತು.

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಇದೊಂದು ಹೆಣ್ಣುಮಕ್ಕಳ ಮಾರಾಟ ಜಾಲ ಎಂದು ಪತ್ತೆ ಹಚ್ಚಿದ ಜಿಲ್ಲಾ ಆಡಳಿತವು, ಇದನ್ನು ಅಕ್ರಮ ದಂಧೆಯೆಂದು ಪರಿಗಣಿಸಿ, ಇಂಥ ಗುಜ್ಜರ ಮದುವೆಗೆ ನಿಷೇಧ ಹೇರಿ ಕಡಿವಾಣ ಹಾಕಿದೆ. ಆದರೆ ಹುಡುಗಿಯರ ಪಾಲಕ ಪೋಷಕರು ಹಣದ ಆಸೆಗೆ ಅಲ್ಲಲ್ಲಿ ಕದ್ದು ಮುಚ್ಚಿ ಈ ಕೆಲಸ ಈಗಲೂ ಮುಂದುವರೆಸಿರುವುದು ತುಂಬಾ ವಿಷಾದದ ಸಂಗತಿ.

## ತಾಯಿ ಮರಣ

### ಸುರಕ್ಷಿತ ತಾಯ್ತನ ಪ್ರತಿಯೊಬ್ಬ ಮಹಿಳೆಯ ಹಕ್ಕು


ಹೆರಿಗೆ ಎಂದರೆ ಹೆಣ್ಣು ಇನ್ನೊಂದು ಜನ್ಮ ಪಡೆದು ಮರುಹುಟ್ಟು ಪಡೆದಂತೆ. ಪ್ರತಿವರ್ಷ ಭಾರತದಲ್ಲಿ 45,000 ತಾಯಂದಿರು ಹೆರಿಗೆ ಸಮಯದಲ್ಲಿ ಪ್ರಾಣ ಕಳೆದುಕೊಳ್ಳುತ್ತಾರೆ. ಇಡಿಯ ವಿಶ್ವದಲ್ಲಿ ಸಂಭವಿಸುವ ತಾಯಿಮರಣದ ಮೂರನೇ ಒಂದು ಭಾಗ ಭಾರತದಲ್ಲಿ ಸಂಭವಿಸುತ್ತದೆ. ಪ್ರತಿ 1 ಲಕ್ಷ ಹೆರಿಗೆಗೆ ಹೆರಿಗೆಯಾದ 42 ದಿನಗಳೊಳಗಾಗಿ ಆಗುವ ತಾಯಂದಿರ ಸಾವಿನ ಸಂಖ್ಯೆಯನ್ನು ತಾಯಿಯ ಮರಣ ದರ ಎಂದು ಪರಿಗಣಿಸಲಾಗುತ್ತದೆ. ಇದು ಮುಂದುವರಿದ ದೇಶಗಳಲ್ಲಿ ಒಂದು ಲಕ್ಷ ಹೆರಿಗೆಗೆ 10 ರಷ್ಟು ಕಡಿಮೆ ಇದ್ದರೆ, ಅತಿ ಹಿಂದುಳಿದ ದೇಶಗಳಲ್ಲಿ ಒಂದು ಲಕ್ಷ ಹೆರಿಗೆಗೆ 3000ದಷ್ಟು ಹೆಚ್ಚೂ ಇದೆ. ಭಾರತದ ಮಟ್ಟಿಗೆ ಹೇಳುವುದಾದರೆ 1938ರಲ್ಲಿ ಇದು 2000 ಇದ್ದರೆ, 1959ರಲ್ಲಿ 1000ಕ್ಕೆ ಇಳಿಯಿತು. 1990ರ ಹೊತ್ತಿಗೆ 560ಕ್ಕೆ ಇಳಿದಿದ್ದು 2015ರಲ್ಲಿ 167 ಇತ್ತು. ಈಗ 130 ಇದೆ. ಗುರಿಯಂತೆ ಕ್ರಿ. ಶ. 2030ರ ವೇಳೆಗೆ ಅದನ್ನು 70ಕ್ಕೆ ಇಳಿಸಬೇಕಿದೆ. ತಾಯಿ ಸಾವಿಗೆ ಹಲವು ಕಾರಣಗಳಿವೆ.

- ರಕ್ತಹೀನತೆ – ಹಿಮೋಗ್ಲೋಬಿನ್ ಅಂಶ 10 ಗ್ರಾಂ% ಗಿಂತ ಕಡಿಮೆ ಇರುವುದು. ಇದು ಸಾವಿನ ಬಹುಮುಖ್ಯ ಕಾರಣ.
- ತಾಯಿಯ ವಯಸ್ಸು: 20 ವರ್ಷಕ್ಕಿಂತ ಕಡಿಮೆ ಹಾಗೂ 30 ವರ್ಷಕ್ಕಿಂತ ಹೆಚ್ಚು
- ಬಸುರಿಯಿರುವಾಗ ಬರುವ ಕೆಲವು ಕಾಯಿಲೆಗಳು
- ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ, ವೈದ್ಯಕೀಯ ಸೌಲಭ್ಯ ಸಿಗದಿರುವುದು, ರಕ್ತಬ್ಯಾಂಕ್ ಇಲ್ಲದಿರುವುದು
- ಮನೆಯಲ್ಲೇ ಆಗುವ ಹೆರಿಗೆಗಳು
- ಮಕ್ಕಳ ನಡುವಿನ ಕಡಿಮೆ ಅಂತರ, ಹೆಚ್ಚೆಚ್ಚು ಮಕ್ಕಳ ಜನನ
- ಆರ್ಥಿಕ ದುಃಸ್ಥಿತಿ, ಅಪೌಷ್ಟಿಕತೆ; ದೈಹಿಕ ಆರೋಗ್ಯ ಕುರಿತ ಅಜ್ಞಾನ
- ಸಾಮಾಜಿಕ ಮೌಢ್ಯಾಚರಣೆ, ತಪ್ಪು ಕಲ್ಪನೆ

ಭಾರತದ ತಾಯಿ ಮರಣ ದರ ಅತಿ ಹೆಚ್ಚು ಅಸ್ಸಾಮಿನಲ್ಲಿ (237) ಹಾಗೂ ಉತ್ತರಪ್ರದೇಶ ಮತ್ತು ಉತ್ತರಾಖಂಡ್ (201)ನಲ್ಲಿ ಇದೆ. ದಕ್ಷಿಣದ ರಾಜ್ಯಗಳಲ್ಲಿ ಸರಾಸರಿ 77 ಇದೆ. ಅದರಲ್ಲಿ ಕೇರಳದಲ್ಲಿ ಪ್ರತಿ ಲಕ್ಷ ಹೆರಿಗೆಗೆ 46 (ಭಾರತದಲ್ಲೇ ಅತಿ ಕಡಿಮೆ) ತಾಯಂದಿರ ಸಾವು ಸಂಭವಿಸಿದರೆ, ಮಹಾರಾಷ್ಟ್ರದಲ್ಲಿ 61, ತಮಿಳುನಾಡಿನಲ್ಲಿ 66 ಇದೆ. ಆದರೆ ಮುಂದುವರಿದ ರಾಜ್ಯ ಕರ್ನಾಟಕದಲ್ಲಿ ಇದು 108 ಇದೆ. ದಕ್ಷಿಣ ಭಾರತದಲ್ಲೇ ಅತಿಹೆಚ್ಚು

Edited with the trial version of Foxit Advanced PDF Editor
To remove this notice, visit: www.foxitsoftware.com/shopping

ತಾಯಿಮರಣ ದರ ಇರುವುದು ನಮ್ಮ ರಾಜ್ಯದಲ್ಲೇ. ಬೆಂಗಳೂರು, ಕರಾವಳಿ ಜಿಲ್ಲೆಗಳಲ್ಲಿ 60ರ ಆಸುಪಾಸು ಅತಿ ಕಡಿಮೆ ತಾಯಿ ಮರಣ ದರವಿದ್ದರೂ, ಉತ್ತರ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚು ಇದೆ.ಅದರಲ್ಲೂ ಕಲಬುರ್ಗಿ, ಕೊಪ್ಪಳ ಜಿಲ್ಲೆಗಳು ಅತಿ ಹೆಚ್ಚು ತಾಯಿ ಮರಣ ದರ ಹೊಂದಿವೆ. ವೈದ್ಯರು–ಸಿಬ್ಬಂದಿಗಳ ಕೊರತೆ, ಬಾಲ್ಯವಿವಾಹ, ರಕ್ತಹೀನತೆ, ಆರೋಗ್ಯ ಕುರಿತ ತಪ್ಪು ಕಲ್ಪನೆ–ಮಾಹಿತಿ, ಸೂಕ್ತ ಸಮಯದಲ್ಲಿ ಸೌಲಭ್ಯ ಸಿಗದಿರುವುದು, ಬಡತನ ಮೊದಲಾದುವು ಅದಕ್ಕೆ ಕಾರಣವಾಗಿವೆ.



ತಾಯಿ ಮರಣ ದರ ಇಳಿಸಲು ಇರುವ ಪರಿಣಾಮಕಾರಿ ಉಪಾಯವೆಂದರೆ ಆರೋಗ್ಯ ಜಾಗೃತಿ, ಮಹಿಳಾ ಸಾಕ್ಷರತೆ ಮತ್ತು ಆರ್ಥಿಕ ಸ್ಥಿತಿ ಸುಧಾರಣೆ. ಜೊತೆಗೆ:

- ಬಾಲ್ಯವಿವಾಹ ನಿಲಿಸುವುದು.
- ಎಲ್ಲ ಹೆರಿಗೆಗಳೂ ಸುಸಜ್ಜಿತ ಆಸ್ಪತ್ರೆಯಲ್ಲಿ ಆಗುವ ವ್ಯವಸ್ಥೆ.
- ತಾಲೂಕಿಗೊಂದು ಬ್ಲಡ್ ಬ್ಯಾಂಕ್ ಸ್ಥಾಪನೆ.
- ತಾಯಿಯ ವಯಸ್ಸು 20–30ರ ನಡುವಿರುವಂತೆ ಎಚ್ಚರವಹಿಸಬೇಕು
- ಮಕ್ಕಳ ನಡುವೆ ಅಂತರ ಸೂಕ್ತ ಅಂತರವಿರಬೇಕು
- ಕುಟುಂಬ ಯೋಜನೆ ಬಳಸುವಂತೆ ಮನವೊಲಿಸುವುದು
- ರಕ್ತಹೀನತೆ ಸರಿಪಡಿಸುವುದು

## ದೇವದಾಸಿ ಪದ್ಧತಿ

**ಸಂಪ್ರದಾಯ ಸಂಸ್ಕೃತಿಯ ಹೆಸರಿನಲ್ಲಿ ಹೆಣ್ಣ ತುಳಿದು.**
**ಶೋಷಿಸುವ ಹುನ್ನಾರ ಇನ್ನು ಸಲ್ಲದೆಂದು ಹೇಳೋ**
**ಕಾಲ ಈಗ ಬಂದೇ ಬಂದಿತೋ**



ಸಾವಿರಾರು ವರ್ಷಗಳಿಂದಲೂ ದಲಿತ ಹೆಣ್ಣು ಮಕ್ಕಳ ಲೈಂಗಿಕ ದಾಸ್ಯಕ್ಕೆ ಕಾರಣವಾಗಿರುವ ದೇವದಾಸಿ ಪದ್ಧತಿಯು ಜಾತಿವ್ಯವಸ್ಥೆಯ ಉತ್ಪನ್ನವಾಗಿದೆ ಹಾಗೂ ಧಾರ್ಮಿಕ ಮಾನ್ಯತೆಯನ್ನು ಪಡೆದುಕೊಂಡಿದೆ. ಆಡಳಿತಗಾರರು, ಪಾಳೆಯಗಾರರು, ಜಮೀನುದಾರರು, ಅಧಿಕಾರಿಗಳು ಮತ್ತು ಹಣವುಳ್ಳವರು ಕಾಮದ ಅಗತ್ಯಕ್ಕಾಗಿ ಈ ಪದ್ಧತಿಯ ಪ್ರಯೋಜನ ಪಡೆದುಕೊಂಡರೆ ಧಾರ್ಮಿಕ ಕವಚದ ಆಶೀರ್ವಾದದಿಂದ ನಾನಾ ಬಗೆಯ ದೇವಾಲಯಗಳು ಮತ್ತು ಪುರೋಹಿತರು ಮತ್ತು ಧಾರ್ಮಿಕ ಮುಖಂಡರು ಈ ಪದ್ಧತಿಯ ಉಳಿಯುವಿಕೆಯಲ್ಲಿ ಪಾತ್ರವಹಿಸಿದ್ದಾರೆ. ದೇವದಾಸಿ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಪದ್ಧತಿಯು ಮುಂದೆ ವೇಶ್ಯಾವಾಟಿಕೆಯ ಸ್ವರೂಪ ಪಡೆದುಕೊಂಡಿತು. ಬ್ರಿಟಿಷರ ಆಡಳಿತ ಕಾಲದಲ್ಲಿ ಅವರುಗಳು ಸ್ಥಾಪಿಸಿದ ದಂಡು ಪ್ರದೇಶಗಳ ಸುತ್ತ ವೇಶ್ಯಾವಾಟಿಕೆಯು ಗಣನೀಯವಾಗಿ ಬೆಳೆದುಕೊಂಡು ಬಂದಿತು. ವೇಶ್ಯಾವಾಟಿಕೆಯು ಒಂದು ದಂಧೆಯಾಗಿ ಬೆಳೆಯಲು ವ್ಯಾಪಕವಾದ ಕೈಗಾರಿಕೀಕರಣ ಮತ್ತು ನಗರೀಕರಣಗಳು ಕಾರಣವಾಗಿವೆ.

- ಮಕ್ಕಳಿಲ್ಲದವರು ಹೆಣ್ಣುಮಗು ಹುಟ್ಟಿದರೆ ಜೋಗುತಿ ಬಿಡುತ್ತೇವೆ ಎಂದು ಕೂಸು ಹುಟ್ಟುವ ಮೊದಲೇ ಮಾಡಿಕೊಳ್ಳುವ ಹರಕೆ
- ಗಂಡುಮಕ್ಕಳಾಗಲಿ ಎಂದು ಮೊದಲನೇ ಹೆಣ್ಣುಮಗಳನ್ನು ಜೋಗುತಿ ಮಾಡುವ ಹರಕೆ
- ಮನೆಯ ಮಂದಿಗೆ ಅನಾರೋಗ್ಯವಾದರೆ, ಆಸ್ತಿ, ಬೆಳೆ ಹಾಳಾದರೆ ಸರಿ ಹೋಗಲೆಂದು ಮಾಡಿಕೊಳ್ಳುವ ಹರಕೆ
- ಹುಟ್ಟಿದ ಹೆಣ್ಣುಮಗುವಿನ ನೆತ್ತಿ ಕೂದಲು ಜಡೆಗಟ್ಟಿದರೆ
- ಅನುವಂಶೀಯವಾದ ಸಂಪ್ರದಾಯದಿಂದ

ಪೂಜಾರಿಯೋ ಅಥವಾ ಜೋಗುತಿಯ ಮೈಮೇಲೆ ಬಂದ ಎಲ್ಲಮ್ಮ ದೇವರೋ ಬಂದು ಮಗಳನ್ನು ಅರ್ಪಿಸಲು ಕೇಳಿದರೆ ಹೆಣ್ಣುಮಗಳನ್ನು ದೇವರಿಗೆ ಬಿಡುವುದಾಗಿ ಹರಸಿಕೊಳ್ಳುವ ಪರಿಪಾಠವಿದೆ. ಬಡತನ, ಶಿಕ್ಷಣದ ಕೊರತೆ ಮತ್ತು ಜಾತೀಯತೆಯಿಂದಾಗಿ ಅಸ್ಪೃಶ್ಯ ಜಾತಿಗೆ ಸೇರಿದ ಹೆಣ್ಣುಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ದೇವದಾಸಿಯರಾಗಿದ್ದಾರೆ. ದೇವದಾಸಿಯರನ್ನಾಗಿ ಮಾಡಲು ಇರುವ ಕಾರಣಗಳನ್ನು ಗಮನಿಸಿದಾಗ ಧರ್ಮ ಮತ್ತು ದೇವರ ಹೆಸರಿನಲ್ಲಿ ಭೀತಿ ತುಂಬಿ ಸಾಮಾಜಿಕ ತಾರತಮ್ಯ, ಆರ್ಥಿಕ ದಾರಿದ್ರ್ಯದಿಂದ ಹುಟ್ಟಿಕೊಂಡ ಅವರ ದಾರುಣ ಅಸಹಾಯಕ ಪರಿಸ್ಥಿತಿಯ ಲಾಭಪಡೆದುಕೊಳ್ಳುವುದು ಸ್ಪಷ್ಟವಾಗುತ್ತದೆ. ಊರಿನ ಮೇಲ್ಜಾತಿ ಭೂಮಾಲೀಕರು ಹದಿಹರೆಯದ ಹುಡುಗಿಯು ಋತುಮತಿಯಾದಾಗ ಅವಳ ಕನ್ಯತ್ವ ಕಳೆಯಲು ಮಾಡುವ ಉಡಿ ತುಂಬುವ ಆಚರಣೆಯ ಖರ್ಚು ತೂಗಿಸಲು ತುದಿಗಾಲಿನಲ್ಲಿ ನಿಂತಿರುತ್ತಾರೆ. ಧಾರ್ಮಿಕ ರಕ್ಷಾ ಕವಚದಡಿ ಮುತ್ತು ಕಟ್ಟುವದನ್ನು ಮುಂಬೈ ಕೆಂಪುದೀಪದ ಪ್ರದೇಶಕ್ಕೆ ಹೋಗಲು ರಹದಾರಿಯಾಗಿ ಮಾರ್ಪಡಿಸಲಾಗಿದೆ. ಮುಂಬೈ, ಸಾಂಗ್ಲಿ, ಮೀರಜ್‌ನಲ್ಲಿ ನೆಲೆಸಿರುವ ಘರ್‌ವಾಲಿಗಳು ಚೆಂದದ, ವಯಸ್ಸಿಗೆ ಬಂದ ಹೆಣ್ಣುಮಕ್ಕಳಿಗೆ ಉಡಿತುಂಬಿಸುವ ಖರ್ಚನ್ನು ಪೂರೈಸಿ ಅವರನ್ನು ಸೀದಾ ವೇಶ್ಯಾವೃತ್ತಿಗೆ ಸಾಗಿಸುವದು ಸಾಮಾನ್ಯ ವಿಷಯವಾಗಿದೆ.

ಸಮೀಕ್ಷೆಯಿಂದ ಲಭ್ಯವಿರುವ ಅಂಕಿಅಂಶಗಳ ಪ್ರಕಾರ ಭಾರತದ ಆರು ರಾಜ್ಯಗಳಲ್ಲಿ ಇದು ಚಾಲ್ತಿಯಲ್ಲಿದೆ. ಬಹುಪಾಲು ತಳಸಮುದಾಯಗಳ, ಕೆಳವರ್ಗಗಳ ಹುಡುಗಿಯರೇ ಇದಕ್ಕೆ ಬಲಿಯಾಗುತ್ತಿದ್ದು 1984ರಲ್ಲಿ ಕರ್ನಾಟಕದಲ್ಲಿ 22,873ರಷ್ಟಿದ್ದ ದೇವದಾಸಿಯರು 2007ರ ಹೊತ್ತಿಗೆ 46,660ದಷ್ಟಾಗಿದ್ದಾರೆ. ಈ ಸಂಖ್ಯೆ ಬೆಳೆಯುತ್ತ ಹೋಗಿದೆ. ಅಷ್ಟೇ ಅಲ್ಲ, ಗಣತಿಗೆ ಸಿಗದವರನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನಿಜವಾದ ಸಂಖ್ಯೆ ಎರಡು ಲಕ್ಷ ಮೀರುವ ಸಾಧ್ಯತೆಯಿದೆ. ಜನಸಾಮಾನ್ಯರಲ್ಲಿ ಕನಿಷ್ಠ ವೈಚಾರಿಕತೆಯನ್ನೂ, ವೈಜ್ಞಾನಿಕ ಜ್ಞಾನವನ್ನೂ

Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಹರಡಬೇಕಾದ ಕಾಲದಲ್ಲಿ ದೇವದಾಸಿ ಪದ್ಧತಿ ಈಗಲೂ ಮುಂದುವರೆದುಕೊಂಡು ಬಂದಿದೆ.


ದೇವದಾಸಿ ಪದ್ಧತಿ ನಿಲ್ಲಿಸಲು ಸಾಮಾಜಿಕ ಕಾಳಜಿಯುಳ್ಳವರು, ದಲಿತ ಚಳುವಳಿ ನಡೆಸಿದ ಹೋರಾಟದ ಫಲವಾಗಿ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ಕಾಯ್ದೆ ಜಾರಿಗೊಂಡಿತು. ಕಾಯ್ದೆಯು ದೇವದಾಸಿಯರನ್ನು ಮಾಡುವುದು ಅಪರಾಧವಾಗಿಸಿದೆಯಲ್ಲದೆ, ದೇವದಾಸಿಯರಿಗೆ ಪುನರ್ವಸತಿಯನ್ನು ಕಲ್ಪಿಸುತ್ತದೆ. ಸಂಬಂಧಪಟ್ಟ ಅಧಿಕಾರಿಗಳ ಇಚ್ಛಾಶಕ್ತಿಯು ಕೊರತೆಯಿಂದಾಗಿ ಇಲ್ಲಿಯವರೆಗೆ ದೇವದಾಸಿಯರನ್ನು ಗುರುತಿಸಲು ನಡೆಸಿದ ಸಮೀಕ್ಷೆಗಳು ಅಪೂರ್ಣವಾಗಿವೆ. ಪುನರ್ವಸತಿ, ಸಾಲ/ ಮಾಸಾಶನಗಳ ಪಡೆಯುವುದು ದುಸ್ತರವಾಗಿದೆ. ಅತಿ ಕಡಿಮೆ ಮಾಸಾಶನ ಜೀವನ ನಿರ್ವಹಣೆಗೆ ಸಾಲದಿರುವುದರಿಂದ ಕೆಲವರು ಪುನರ್ವಸತಿಯ ಬಳಿಕ ಮತ್ತೆ ಲೈಂಗಿಕ ಕಾರ್ಯಕರ್ತರಾಗುತ್ತಿದ್ದಾರೆ. ಅವರ ಹೆಣ್ಣುಮಕ್ಕಳೂ ಸೂಕ್ತ ಶಿಕ್ಷಣ, ಉದ್ಯೋಗ, ಬದುಕುವ ಅವಕಾಶಗಳಿಲ್ಲದೆ ದುಸ್ತರ ಬದುಕು ನಡೆಸುವಂತಾಗಿದೆ.

## ಮದ್ಯಪಾನ ನಿಷೇಧ

ಗಾಂಧೀಜಿ ಹೇಳಿದರು, 'ಕುಡಿತ ಬೇಡ', ನಾವು ಹೇಳುತ್ತೇವೆ, ಸಾರಾಯಿ ಅಂಗಡಿಗಳೇ ಬೇಡ.!!

"ನಮ್ಮ ಭಾರತದಲ್ಲಿ ಬಡತನವೆಷ್ಟೇ ಇದ್ದರೂ ತಡೆದುಕೊಳ್ಳಬಹುದು, ಆದರೆ ನಮ್ಮ ಮಧ್ಯೆ ಕುಡುಕರು ಇರುವುದು ಬೇಡವೇ ಬೇಡ.ಸಾರಾಯಿ ಹಣದಿಂದ ಮಕ್ಕಳಿಗೆ ಶಿಕ್ಷಣ ಕೊಡುವ ಪರಿಸ್ಥಿತಿ ಇದ್ದರೆ, ಅಂಥ ಶಿಕ್ಷಣವೇ ಬೇಡ"ಎಂದು ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಹೇಳಿದ್ದಾರೆ.

ಮಹಿಳೆಯರ ಮೇಲಿನ ಹಿಂಸೆ, ಹೊಡೆತ, ದೌರ್ಜನ್ಯಕ್ಕೆ ಹಾಗೂ ಬಡತನಕ್ಕೆ ಕುಡಿತ ಒಂದು ಮುಖ್ಯ ಕಾರಣವಾಗಿದೆ. 'ಹೆಂಡಸಾರಾಯಿ ಸಹವಾಸ, ಹೆಂಡತಿ ಮಕ್ಕಳ ಉಪವಾಸ' ಎಂಬ ಪರಿಸ್ಥಿತಿಯನ್ನು ಪ್ರತಿಯೊಂದು ಮನೆಯಲ್ಲಿ ಕಾಣಬಹುದು. ಕುಡಿವ ಗಂಡನ ಸಂಶಯ, ಬಡಿತ, ಚುಚ್ಚುಮಾತು, ವಂಚನೆಗಳಿಂದ ಮನನೊಂದು ಮಹಿಳೆಯರು ನಾನಾ ಒತ್ತಡ, ಮನೋದೈಹಿಕ ಕಾಯಿಲೆಗಳಿಗೆ ಈಡಾಗುತ್ತಾರೆ. ಕುಡಿತದ ಪರಿಣಾಮವಾಗಿ ಸಾಕಷ್ಟು ಕುಟುಂಬಗಳು ಒಡೆದು ಹೋಗುತ್ತಿವೆ. ಕುಡಿತದಿಂದಾಗುವ ಹಿಂಸೆಯು ಮಕ್ಕಳ ಮಾನಸಿಕ ಪರಿಸ್ಥಿತಿಯ ಮೇಲೆ ಅಪಾರ ಪರಿಣಾಮ ಬೀರುತ್ತದೆ.



Edited with the trial version of
Foxit Advanced PDF Editor
To remove this notice, visit:
www.foxitsoftware.com/shopping

ಕುಡಿವ ಪಾಲಕರಿರುವ ಕುಟುಂಬಗಳು ತೀವ್ರವಾದ ಹಣದ ಕೊರತೆ ಎದುರಿಸುತ್ತವೆ. ಮಕ್ಕಳಿಗೆ ಪೌಷ್ಠಿಕ ಆಹಾರ ಕೊಡುವುದು ಅಸಾಧ್ಯವಾಗುವ ಕಾರಣ ಮಕ್ಕಳ ಬೆಳವಣಿಗೆ, ವ್ಯಕ್ತಿತ್ವದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಬಡತನ, ಪೌಷ್ಠಿಕ ಆಹಾರದ ಕೊರತೆ, ಕುಡಿತ ಮತ್ತು ಸಾಲದ ವಿಷಚಕ್ರದ ಸುಳಿಯಲ್ಲಿ ಕುಟುಂಬದವರ ಅನಾರೋಗ್ಯ ಮತ್ತು ಅಕಾಲಿಕ ಮರಣ ಮಾಮೂಲಿಯಾಗಿದೆ.

**ಸಾರಾಯಿ ನಿಷೇಧ ಮಾಡದಿರಲು ಸರಕಾರವು ಹಲವಾರು ಕಾರಣಗಳನ್ನು ಕೊಡುತ್ತದೆ:**

- ಸಾರಾಯಿ ಮಾರಾಟದಿಂದ ಬಹಳಷ್ಟು ತೆರಿಗೆ ಬರುತ್ತದೆ, ಈ ಹಣವನ್ನು ಜನಕಲ್ಯಾಣಕ್ಕೆ ಉಪಯೋಗ ಮಾಡಲಾಗುವುದು ಎನ್ನುತ್ತದೆ ಸರಕಾರ. ಸರಕಾರವು ಸಾರಾಯಿ ನಿಷೇಧದಿಂದ ಅಂದಾಜು 15,000 ಕೋಟಿ ತೆರಿಗೆಯನ್ನು ಕಳೆದುಕೊಳ್ಳಬಹುದು.

- ಆದರೆ ಸಾರಾಯಿ ನಿಷೇಧದಿಂದ ಜನರ ಕೈಯಲ್ಲಿ 20,000 ಕೋಟಿ ಹಣ ಉಳಿಯುತ್ತದೆ. ಈ ಹಣವನ್ನು ಜನರು ಅವರ ಆಹಾರ, ಆರೋಗ್ಯ ಮತ್ತು ಮನೆ ಬಳಕೆಗೆ ಬಳಸಬಹುದು. ಇದರಿಂದ ಮತ್ತೆ ಸರಕಾರಕ್ಕೆ ಹೆಚ್ಚು ತೆರಿಗೆ ಬರುತ್ತದೆ.

**ಆದರೆ ಇವು ಬರಿಯ ನೆವಗಳು.** ಗುಜರಾತ ರಾಜ್ಯ 60 ವರ್ಷಗಳ ಹಿಂದೆಯೇ ಸಾರಾಯಿ ನಿಷೇಧ ಮಾಡಿದ್ದು, ಅದು ನಮಗೇಕೆ ಸಾಧ್ಯವಾಗುತ್ತಿಲ್ಲ? ಬಿಹಾರ, ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲಿ ಕೂಡ ಸಾರಾಯಿ ನಿಷೇಧ ಮಾಡಲಾಗಿದೆ. ನಮ್ಮ ಸಂವಿಧಾನದ ಕಲಂ 47ರ ಪ್ರಕಾರ, ಆರೋಗ್ಯಕ್ಕೆ ಹಾನಿ ಮಾಡುವ ಎಲ್ಲಾ ಪದಾರ್ಥಗಳನ್ನೂ ಸರಕಾರವು ನೀಷೇಧಿಸಬೇಕು. ಸಂವಿಧಾನದ ಮೇಲೆ ಪ್ರಮಾಣ ಮಾಡಿರುವ ನಮ್ಮ ಸರಕಾರವು ನೆಪಗಳನ್ನು ಹೇಳುತ್ತ ಕೂರದೆ ತಾನೇ ಮುಂದಾಗಿ ಸಾರಾಯಿ ನಿಷೇಧ ಮಾಡಲೇಬೇಕು.